Regd No. M 1293 ॥ सत्यान्नास्ति परो धर्मः ॥ ಬಿಡಿ ಸಂಚಿಕೆ ೩ ಸೈ

ಸತ್ಯವಾದಿ

ವರ್ಷಕ್ಕೆ ರೂ. 1—0—0 (ಮೈಸೂರು ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಪ್ರತಿಷ್ಠಿತವಾದುದು) ವರ್ಷಕ್ಕೆ ರೂ. 1—10—0
ಸ್ಥಳಕ್ಕೆ ಪ್ರತಿ ಬುಧವಾರ ಪ್ರಕಟಿಸಲ್ಪಡುವದು ಪರಸ್ಥಳಕ್ಕೆ

ಸಂಪುಟ 19] ಮೈಸೂರು. ಬುಧವಾರ 26 ನೆ ಫೆಬ್ರವರಿ 1936 [ಸಂಚಿಕೆ 24

ಮೈಸೂರು ಎಸ್. ಎನ್. ಪಂಡಿತರ

ಬಿಳೀಹಲ್ಲುಪುಡಿ! ಕರೀಹಲ್ಲುಪುಡಿ! ಮೈಸೂರು ಟೂತ್‌ಪೇಸ್ಟ್!

ಬಿಳೀಹಲ್ಲುಪುಡಿ—ಇದರಲ್ಲಿ ಸಿಹಿ ಪುಡಿಯು ಸುವಾಸಪ್ಪೆ ಸುರುಚಿ ಇವುಗಳಿಂದ ಕೂಡಿ ಹಲ್ಲುಗಳನ್ನು ಶುಭ್ರವಾಗಿಡುತ್ತದೆ. ಉಪ್ಪಿನ ಪುಡಿಯು ರುಚಿಯೂಗಿಯೂ, ಆರೋಗ್ಯಕರವಾಗಿಯೂ ಇದೆ. ಪೊಟ್ಟಣ 1 ಕ್ಕೆ (ಸಿಹಿ, ಉಪ್ಪು) 9 ಪೈ ; ಡಬ್ಬಿ 1 ಕ್ಕೆ (ಸಿಹಿ ಮತ್ತು ಉಪ್ಪು) 1 ಆಣೆ.

ಕರೀ ಹಲ್ಲುಪುಡಿ—ಇದನ್ನು ನಿತ್ಯವೂ ಉಪಯೋಗಿಸುವುದರಿಂದ, ಹಲ್ಲುಗಳ ಎಲ್ಲಾ ಕಾಯಿಲೆಗಳನ್ನೂ ಗುಣಮಾಡಿ ಪುನಃ ತೇಗಬಾರದಂತೆ ಅಡ್ಡಿಪಡಿಸುತ್ತದೆ. ಹಲ್ಲುಗಳ ಕೊಳೆಯನ್ನು ತೆಗೆದು ಬೆಳ್ಳಗೆ ಇಡುವುದರಲ್ಲಿ ಅದ್ವಿತೀಯವಾದ್ದು. ಟಿ ½ ಕ್ಕೆ 2 ಆಣೆ.

ಮೈಸೂರು ಟೂತ್‌ಪೇಸ್ಟ್—ಸೀಮೆಯಿಂದ ಬರುವ ಟೂತ್‌ಪೇಸ್ಟ್‌ಗಳಿಗಿಂತ ಗುಣ ಮುಂತಾದುವುಗಳಲ್ಲಿ ಕಡಮೆಯಾಗಿಲ್ಲ. ನಯ, ಹೊಳಪು, ಸುವಾಸನೆ, ರುಚಿ ಇವುಗಳಿಂದ ಕೂಡಿ ವಸಡುಗಳಿಗೆ ಬಲವನ್ನೂ, ಹಲ್ಲುಗಳಿಗೆ ಥಳಥಳ್ಳವನ್ನೂ ಉಂಟುಮಾಡುತ್ತದೆ. ಇದರ ಉಪಯೋಗದಿಂದ ಹಲ್ಲುಗಳನ್ನು ಹಾಳುಮಾಡತಕ್ಕ ಟಾರ್-ಟರ್ (ದಂತ ತಕ್ಕರ) ಅಂಟು, ಹುಳು, ಮುಂತಾದವುನಾಶವಾಗುತ್ತವೆ. ಇದರಲ್ಲಿ ಎಲ್ಲಾ ಶಾಸ್ತ್ರೀಯ ಪದಾರ್ಥಗಳೇ ಸೇರಿರುತ್ತದೆ. ಇದನ್ನು ಬ್ರಷ್ ಅಥವಾ ಬೆರಳಿನಿಂದ ಉಪಯೋಗಿಸಬಹುದು. ಒಂದಾವರ್ತಿ ಪರಿಕ್ಷಿಸಿ ನೋಡಬೇಕಾದ್ದು. ಟಿ 1 ಕ್ಕೆ 5 ಆಣೆ.

[ಸರಾ:—ಮೇಲಿನ ಪುಡಿಗಳಲ್ಲಿ ಬತ್ತದಪೊಟ್ಟಿಸಬೂದಿ, ಸೀಮೆಸುಣ್ಣ ಇವು ಸೇರಿಲ್ಲ. ನಕಲು ಮೂಲುಗಳಿಗೆ ಮೋಸಹೋಗಬೇಡಿ. ವ್ಯಾಪಾರಿಗಳಿಗೆ ಹೆಚ್ಚು ಕಮಿಷ್ ಕೊಡಲ್ಪಡುವದು. ನಮ್ಮಲ್ಲಿ ಎಲ್ಲಾ ವಿಧವಾದ ಆಯುರ್ವೇದೀಯ ಮಹೌಷಧಗಳೂ ತಯಾರಾಗುತ್ತವೆ. ಕ್ಯಾಟಲಾಗಿಗೆ ಬರೆಯಿರಿ]

ಪ್ರೊಪ್ರೈಟರ್ಸ್
ಎಸ್. ಎಸ್. ಪಂಡಿತ್ ಅಂಡ್ ಸನ್ಸ್
Manufg Chemists Druggists & Physician

ಮಳವಳ್ಳಿ ಏಜೆಂಟರು :
ಎಂ| ಜಿ. ಎಸ್. ವೆಂಕಟರಾವ್

ಆಡ್ರೆಸ್
ದಿ ಮೈಸೂರು ಆಯುರ್ವೇದಿಕ್ ಫಾರ್ಮೆಸಿ
೯೦ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

THE QUILON BANK

5 per cent Three Year Cash Certificates

— are —

issued at all the offices of the Bank.

For particulars please apply to the Head Office, Quilon, or Branches :

Alleppey	Ernakulam	Royapettah
Alwaye	Jaffna	Sherthallai
Bangalore	Kayamkulam	Secunderabad
C. & M. Station	Kottayam	Tenkasi
Bangalore City	Madras	Tinnevelly Jn.
Chirayinkil	Madura	Tinnevely Town
Cochin	Mount Road	Trichinopoly
Coimbatore	Mysore	Trivandrum
Coonoor	Nagarcoil	Tuiticorin
Erode	Quilon	Vellore

The Quilon Bank Limited

(Incorporated in Travancore, 1919)

Member -- Reserve Bank of India

Mysore better than Bombay.

Polish Visitor on Development

Professor Stefan Stasiak, a Polish philosopher and philogist who has devoted his life for the study of Indian thought and who is now touring this country, said in an interview at Bombay, that his visit had "painfully disillusioned" him.

"In Europe" he said, "we are given the impression that India is a wonderland—full of mysticism and beauty. Bombay has tried to adjust herself to Western civilization, but the elements do not blend harmoniously. It was only when I went to Mysore, which is developing along the right Hindu lines, and into the country, that I found the correct environment. (S. T)

ಗುಲಿಸ್ತಾನ್

(ಕಾಪಿರೈಟ್)

ರಾಜನೀತಿ

(೧೭)

ಅನ್ಯಾಯಪ್ರವರ್ತಕನಾದ ಒಬ್ಬ ದೊರೆಯು ಒಬ್ಬ ಸಾಧುವನ್ನು ಕುರಿತು "ಪಾರ್ಥನೆಗಿಂತಲೂ ಅಮೂಲ್ಯವಾದದೇನಿವುದ ?" ಎಂದು ಕೇಳಿದನು. ಅದಕ್ಕವನು "ನೀನು ಪ್ರಾತಃಕಾಲದಿಂದ ಮಧ್ಯಾಹ್ನ ದವರೆಗೆ ನಿದ್ರಿಸುವುದು ಅನೇಳಿಯಲ್ಲಾದರೂ ಜನರನ್ನು ಪೀಡಿಸದಿರುವುದು" ಎಂದು ಉತ್ತರಿಸಿದನು. ಒಬ್ಬಾನೊಬ್ಬ ಕ್ರೂರ ದೊರೆಯು ಮಧ್ಯಾಹ್ನದ ಹೊತ್ತಿನಲ್ಲಿ ವಲಗಿರುವುದನ್ನು ನಾನು ನೋಡಿ, ಪಾಪದ ಮೂರ್ತಿವತ್ತಾದ ಇವನು ಜೋಗುಳವನ್ನು ಹಾಡಿ ಮಲಗಿಸಿದಂತಿರುವನು ಇವನ ಜಾಗೃತಾವಸ್ಥೆಗಿಂತಲೂ ನಿದ್ರಾವಸ್ಥೆಯಲ್ಲಿರುವುದೇ ಉತ್ತಮವೆನಿಸುವುದರಿಂದ ಇಂತಹ ಪಾಪಿಯು ಸಕ್ತರೇ ಮೇಲು', ಎಂದು ಹೇಳಿದನು.

೧೪

ಒಬ್ಬ ಪ್ರಾಚೀನ ದೊರೆಯು ರೈತರಿಂದ ಕಡಾಯವನ್ನು ವಸೂಲ್ಮಾಡುವುದರಲ್ಲಿ ಮುತುವರ್ಜಿ ಇಡದೇಯೂ ಅದರೆ ಸೈನಿಕರಿಗೆ ಸಂಬಳ ಕೊಡುವುದರಲ್ಲಿ ಕೃಪಣತೆಯನ್ನು ತೋರುತ್ತಲೂ ಇದ್ದನು. ಹೀಗಿರುವಲ್ಲಿ ಪ್ರಬಲಶತ್ರು ಒಬ್ಬನು ಯುದ್ಧಕ್ಕೆ ಬಂದಾಗ ಸೈನಿಕರು ಆ ಶತ್ರುವನ್ನು ಎದುರಿಸದೇ ಹಿಂದಿರುಗಿದರು. ದೊರೆಯು ತನ್ನ ಸೈನಿಕರನ್ನು ಸರಿಯಾದ ವೇತನದಿಂದ ಸನ್ಮಾನಿಸದಿದ್ದರೆ ಅವರು ಶತ್ರುಧಾರಿಗಳಾಗಿ ಕರ್ತವ್ಯಕರ್ಮವನ್ನು ಮಾಡುವುದರಲ್ಲಿ ಉದಾಸೀನತೆಯನ್ನು ತೋರುವರು. ಜೀವನಸಾಧನೆಯೇ ಇಲ್ಲದ ಯೋಧನು ಯುದ್ಧದಲ್ಲಿ ಧೈರ್ಯಸಾಹಸವನ್ನೇನು ಪ್ರದರ್ಶಿಸಬಲ್ಲನು ?

ಇಂತಹ ಅಭಿಮತವುಳ್ಳವರ ಪೈಕಿ ಒಬ್ಬಾತನು ನನಗೆ ಕೊಂಚ ಪರಿಚಯವುಳ್ಳವನಾಗಿದ್ದನು. ನಾನು ಅವನನ್ನು ಪರಿಸ್ಥಿತಿಯು ಅಲ್ಪ ಸ್ವಲ್ಪ ಒದಲಾದ ಮಾತ್ರಕ್ಕೆ, ಬಹುಕಾಲದವರೆಗೂ ನೌಕರಿಯಲ್ಲಿಟ್ಟುಕೊಂಡು ಜೀವನೋಪಾಯವನ್ನು ಕೊಟ್ಟ ತನ್ನ ಧಣಿಯ ಉಪಕಾರವನ್ನು ಮರೆತ, ಅವನನ್ನು ತ್ಯಜಿಸಿ ಶಕ್ತಿಂಥಾವನು ಅಯೋಗ್ಯನು, ಕೃತಘ್ನನು ನೀಚನು, ಮರ್ಯಾದೆ ಇಲ್ಲದವನು ಎಂದು ನಿಂದಿಸಿದೆನು. ಅದಕ್ಕವನು, "ನಿನಗೆ ನಿಜಾಂಶವು ತಿಳಿದರೆ ನನ್ನನ್ನು ಉದಾರತ್ವದಿಂದ ಕ್ಷಮಿಸುವಿರೆಂಬ ಭರವಸೆಯು ನನಗೆ ಇದೆ. ಅಕಸ್ಮಾತ್ತಾಗಿ ಕುದುರೆಗೆ ಆಹಾರವಿಂತಿಷ್ಟು; ಜೀನನ್ನೇ ಒತ್ತೆಯಿಡಬೇಕಾಯಿತು.—ದೊರೆಯು ಕೃಪಣತ್ವದಿಂದ ಸೈನ್ಯದ ವೇತನವನ್ನು ನಿಲ್ಲಿಸಿಬಿಟ್ಟರೆ, ತನಗೋಸ್ಕರವಾಗಿ ಸೈನ್ಯವು ಹೃತ್ಪೂರ್ವಕವಾಗಿ ಸೇವೆಮಾತಲೆಂಬ ನಿರೀಕ್ಷಣೆಯನ್ನೂ ಮರೆಯಬೇಕಾಗುವುದು" ಎಂದು ನುಡಿದನು.—ನಿನ್ನ ಪರವಾಗಿ ಉತ್ಸಾಹಿಯಾಗಿರಲು ವೀರಸೈನಿಕನಿಗೆ ಸರಿಯಾಗಿ ಹಣವನ್ನು ಕೊಡು. ಅವನ ವೇತನಕ್ಕೆ ಸೊನ್ನೆಯಾದರೆ ಬೇರೆ ಎಲ್ಲಿಯಾದರೂ ಕಲಸಮಾಡಲು ಅವನು ಹೋಗುವನು.—ಯುದ್ಧಾಳವನ್ನು ಆಹಾರದಿಂದ ಕೃಪ್ತಿಪಡಿಸುವವರೆಗೆ, ಅತನು ಸಾಹಸದಿಂದ ಯುದ್ಧಮಾಡುವನು ಹೊಟ್ಟೆಯು ಖಾಲಿಯಾಗುವ ಹೊತ್ತು ಒಂದರೆ ಅತನು ಹೇಳದೆ ಕೇಳದೆ ಕಾಲಿಗೆ ಬುದ್ಧಿ ಹೇಳುವನು.

ಡಾಕ್ಟರವರ ದರ್ಪ

"ನಮಸ್ತೆ! ಸೋದರ ಜಯವಲ್! ನಾನು ಗುರ್ತಿಸಲಾರದೆ ಹೋದೆ ತಾವು ಬಹಳ ಚನ್ನಾಗಿ ಗಡ್ಡವನ್ನು ಬೆಳಿಸಿರುತ್ತೀರಿ! ಯೂರೋಪಿನಿಂದ ಯಾವಾಗ ಬಂದಿರಿ?"

"ಮೊನ್ನೆ ತಾನೆ ಬಂದೆ"

ಸ್ನೇಹಿತವರ ಹಾಶಯವಾ! ನೀವು ಎದುರಿಗೂ ಗಡ್ಡವನ್ನು ಬೆಳೆಸಿರಲಿಲ್ಲ. ಈಗೇನು ಬದಲಾಯಿಸಿರುವಿ. ದೀಪಾವಳಿ ಹಬ್ಬದ ದಿನ ನೀವು ಕಳುಹಿಸಿದ ಫೊಟೋದಲ್ಲಿ ಸಿವ್ಮ್ ವೋರೆಯು ಪರೇಡ್ ಮೈದಾನದೋಪಾದಿ ಶುಭ್ರವಾಗಿದೆ. ಇಷ್ಟರೊಳಗೆ ಏನು ಈ ಅವಸ್ಥೆ.'

"ಸೋದರನೇ—ಈಗ ಡಾಕ್ಟರು ಕೆಲಸವೆಲ್ಲಾ ದರ್ದದಲ್ಲಿದೆಯೆಂದರೆ, ಈ ಕಲಸಕ್ಕೆ ಮುಖ್ಯವಾಗಿರಬೇಕಾದ್ದು ಮೇಲಿನ ಅರ್ಧಾಟ. ಈ ವಿಾಸೆ, ಈ ಗಡ್ಡ ಇಲ್ಲದಿದ್ದರೆ ರೋಗಿಷ್ಟುಡಾಕ್ಟರು ಅನುಭವವಿಲ್ಲದ ಹುಡುಗನೆಂದು ಭಾವಿಸುವನು. ಗಡ್ಡ ವಿಾಸೆಗಳಿದ್ದರೆ ಡಾಕ್ಟರು ಈ ಕಾಲದ ಸ್ವಾರ್ಥಪರಾಯಣರಲ್ಲ, ಬಹಳ ದೈವಭಕ್ತರಂತೆ ಇದ್ದಾರೆ, ಎಂದು ಭಾವಿಸುವನು"

ಡಾಕ್ಟರ್ ಜಯವುಲ್ ನಿಶ್ಚಯವಾಗಿಯೂ ಸ್ವಲ್ಪ ಬುದ್ಧಿವಂತನೆಂದೇ ಹೇಳಬಹುದು. ಆತನು ಈ ಪ್ರಕಟಣೆಗಳ ಪ್ರಪಂಚದಲ್ಲಿರುವ ವೋಸಗಳನ್ನು ಏಕೆ ಅನುಭವನೂಡಿಕೊಂಡನ ? ಉತ್ತನುಸ್ಥಿತಿಗೆ ಬರಲಿಕ್ಕೆ ಆಗಿದ್ದಲ್ಲಿ ಈ ೨೦ ನೆಯ ಶತಾಬ್ದದಲ್ಲಿ ಟೌಂಟಾಂ ತಡಕ್ ಬಡಕ್‌ಗೆ ಎಷ್ಟು ಅಡಿ ಸತ್ಕಾರಗಳಿರುವವೋ ಆತನಿಗೆ ಚೆನ್ನಾಗಿ ತಿಳಿದಿತ್ತು. ಆದುದರಿಂದ ಆತನು ಈ ಜ್ಞಾನವನ್ನು ಹೆಚ್ಚು ಧನಾರ್ಜನೆಗಾಗಿ ಉಪಯೋಗಿಸಲೆಳಿಸಿದನು.

ಆತನು ರಾಜಬೀದಿಯಲ್ಲಿ ಎರಡು ಅಂಗಡಿಗಳನ್ನು ಬಾಡಿಗೆಗೆ ತೆಗೆದುಕೊಂಡನು. ವೊದಲಿನದು ಔಷಧಿಗಳ ಷಾಪು, ಎರಡನೆಯದು ಕ್ಲಿನಿಕಲ್ಲಿಂಗ್ ರೂಂ. ಔಷಧಿಗಳ ಷಾಪಿನಲ್ಲಿಯ ಕಿಟಕಿಗಳಲ್ಲಿ ಎರಡು ದೊಡ್ಡ ದೊಡ್ಡ ಸೀಸೆಗಳಲ್ಲಿ ಕಪ್ಪು, ಕೆಂಪು ಬಣ್ಣಗಳುಳ್ಳ ನೀರನ್ನು ತುಂಬಿಸಿಟ್ಟನು. ರಾತ್ರಿಸಮಯಗಳಲ್ಲಿ ಅವು ಹೆಚ್ಚು ದೂರಕ್ಕೆ ಕೂಡ ಕಾಣುವಂತೆ ಅವುಗಳ ಹಿಂದೆ ಪ್ರಕಾಶಮಾನವಾದ ದೀಪವೊಂದನ್ನು ಬೆಳಗಿಸುತ್ತಿದ್ದನು. ಹಿತ್ತಾಳೆಯ ಟೇಬಲ್ ವೇಲೆ ತನ್ನ ಹೆಸರು, ಎಮ್.ಆರ್.ಸಿ.ಎಸ್. ಯೂನಿವರ್ಸಿಟಿ ಡಿಗ್ರಿಗಳು ಇವನ್ನು ಅಕ್ಷರಕ್ಕೆ ಕಾಲಾಣೆಯಂತೆ ಕೊಟ್ಟು ಕೆತ್ತಿಸಿದನು. ಅದರ ವೇಲೆ ಒಂದು ಪಕ್ಕದಲ್ಲಿ ರೋಗಿಗಳನ್ನು ನೋಡುವ ಕಾಲವನ್ನು ಕೂಡ ಬರೆಯಿಸಿ ಬಾಗಿಲಲ್ಲಿ ನೇತುಹಾಕಿದನು. ಎರಡನೆಯ ಪಕ್ಕದ ಗೋಡೆಗೆ ಮತ್ತೊಂದು ಸ್ಮೆಡೋಡಿನಲ್ಲಿ "ಡಾಕ್ಟರು ಸಾಹೇಬು ಪ್ರಪಂಚದಲ್ಲಿಯ ಎಲ್ಲಾ ರೋಗಗಳನ್ನು ನಿವಾರಣೆಮಾಡುವದರಲ್ಲಿ ಅದ್ವಿತೀಯ ಪುರುಷರೆಂದೂ ಇಂಜೆಕ್ಷನ್ ಮಾಡುವದರಲ್ಲಿಯಾಗಲಿ, ವ್ಯಾಧಿಯನ್ನು ಗ್ರಹಿಸಿ ಕೂಡಲೆ ಅದನ್ನು ನಿವಾರಣೆಮಾಡುವದರಲ್ಲಿ ಯಾಗಲಿ ವಿಶೇಷಜ್ಞರೆಂದು ಜಗದ್ವಿಖ್ಯಾತಿಪಡೆದವರೆಂದೂ" ಬರೆಯಿಸಿ ಹಾಕಿದನು. ಟೆಲಿಫೋನಿಗೆ ಕೂಡ ಆರ್ಡರು ಕೊಟ್ಟು ಒಂದನು. ಟೆಲಿಫೋನು ಕಂಪೆನಿಯವರು ಒಂದು ವಾರದೊಳಗಾಗಿ ಟೆಲಿಫೋನ್ ಕನೆಕ್ಷನ್ ಕೊಡುವದಾಗಿ ವಾಗ್ದಾನಮಾಡಿದರು. ಡಾಕ್ಟರು ಸಾಹೇಬು ಬಹಳ ಆಯಾಸದಿಂದಿರುವನೆಂದು ಭಾವಿಸಲು ರೋಗಿಗಳು ಯಾರಾದರೂ ಬಂದಲ್ಲಿ ಒಂದು ಗಂಟೆ ಅಥವಾ ಅರ್ಧ ಗಂಟೆಹೊತ್ತು ಹೊರಗೆ ಕೂಡಿಸಿದ್ದು ಆಮೇಲೆ ಒಳಕ್ಕೆ ಕರೆತರಲು ತನ್ನ ನೌಕರನಿಗೆ ಮುಂಜೆಯೇ ತಿಳಿಸಿದ್ದನು.

ಈ ಏರ್ಪಾಟೆಲ್ಲಾ ಆಯಿತು. ಆದರೆ ರೋಗಿ ಎಲ್ಲಿ! ೨-೩ ದಿನಗಳು ಹೀಗೆಯೇ ಕಳೆದು ಹೋದವು. ಡಾಕ್ಟರೂ ನೌಕರನೂ ಬೆಳಿಗ್ಗೆಯಿಂದ ಸಾಯಂಕಾಲದವರಿಗೂ, ಮಕ್ಷಿಕಾ ಸಂಹಾರವನ್ನು ಮಾಡುತ್ತಿದ್ದರಾಗಲಿ ರೋಗಿಯ ಸುಳಿವೇ ಇರಲಿಲ್ಲ ಅಷ್ಟು ಏಕೆ? ಯಾರೂ ಈ ಔಷಧಶಾಲೆಯ ಕಡೆಗೆ ದೃಷ್ಟಿಯನ್ನಿಡುವ ಪಾಪಕ್ಕೆ ಕೂಡೆ ಹೋಗಲಿಲ್ಲ.

ನಾಲ್ಕನೆಯದಿನ ಒಬ್ಬ ಮನುಷ್ಯನು ಬಂದು "ಡಾಕ್ಟರು ಸಾಹೇಬರಿರುವರೇ?' ಎಂದು ಕೇಳಿದನು.

ನೌಕರನು "ಆ ಇದ್ದಾರೆ, ಕೂತುಕೊಳ್ಳಿರಿ. ಈಗಲೇ ಬಾರು ರೋಗಿಗಳಿಗೆ ಚಿಕಿತ್ಸೆ ಮಾಡಿ ಮಾಡಿ ಆಯಾಸಗೊಂಡಿದ್ದಾರೆ. ಸ್ವಲ್ಪ ಹೊತ್ತಿನ ಮೇಲೆ ಹೊರಗೆ ಬರುವರು' ಎಂದು ಎಷ್ಟೋ ವಿಧೇಯತೆಯೊಡನೆ ಕುಳ್ಳಿರಿಸಿ ಡಾಕ್ಟರವರನ್ನು ಸಮೀಪಿಸಿ ವಿಷಯವನ್ನು ತಿಳಿಸಿದನು. ಸುಮಾರು ಅರ್ಧಗಂಟೆಹೊತ್ತು ಅವನನ್ನು ಕುಳ್ಳಿರಿಸಿದ್ದು ತರುವಾಯ ಒಳಗೆ ಕರೆದುಕೊಂಡು ಹೋದನು. ಆಗಂತುಕಮಹಾಶಯನು ಡಾಕ್ಟರ್ರವರನ್ನು ಸಮೀಪಿಸಿ, ಡಾಕ್ಟರು ಸಾಹೇಬರವರು ಕನೆಕ್ಷನ್ನೇ ಇಲ್ಲದ ಟೆಲಿಫೋನು ರಿಸೀವರ್‌ಕೈಲಿ ಹಿಡಿದು ಹೀಗೆ ಮಾತನಾಡುತ್ತಿರುವದನ್ನು ಕಂಡನು.

"ಆ" ಹೌದ. ಅವನಿಗೆ ಎರಡು ಮಾತ್ರೆಗಳನ್ನೂ, ಚೂರ್ಣವನ್ನೂ ಕೊಡು. ಬೆಳಿಗ್ಗೆ ಸಾಯಂಕಾಲ ಆಸ್ಪರಿನ್ ಮಾತ್ರ ಮರೆಯಕೂಡದು. ನೋಡು ಮೈಬಿಸಿತಾಗ ರೋಗಿಯನ್ನು ಜಾಗ್ರತೆಯಿಂದ ಕಾಪಾಡತಕ್ಕದ್ದು. ಹಾಗೆ ಮಾಡದಿದ್ದಲ್ಲಿ ನೆಗಡಿ ಹಿಡಿದು ನ್ಯೂಮೋನಿಯಾ ಬರುವಸಂಭವವುಂಟು. ತಿನ್ನಲು ಅಂಜನ್ನು ಮಾತ್ರ ಕೊಡಬೇಕು. ಒಂದು ವೇಳೆ ಕೆಮ್ಮಲು ಬರುವಂತೆ ಆದಲ್ಲಿ, ಅದರ ಕಫವನ್ನು ಒಂದು ಶೀಶೆಯಲ್ಲಿ ಶೇಖರಿಸಿಟ್ಟಿರತಕ್ಕದ್ದು. ನಾನು ಅದನ್ನು ವೀಲಕ್ಕೆಳಸಿ ಪರೀಕ್ಷೆ ಮಾಡಿಸುವೆನು.'

೫-೧೦ ನಿಮಿಷಗಳಕಾಲ ಈ ಬಗೆಯಲ್ಲಿ ಟೆಲಿಫೋನಿನಲ್ಲಿ ವಾತನಾಡಿ, ಡಾಕ್ಟರು ರಿಸೀವರ್‌ನ್ನು ಆಚೆಗೆ ಇರಿಸಿದನು. ಆಗಂತುಕ ಮಹಾಶಯನು ಮಂತ್ರಮುಗ್ಧ ಮನುಷ್ಯನೋಪಾದಿ, ಅನಿಮಿಷನೇತ್ರನಾಗಿ ಹೆಚ್ಚು ಆಶ್ಚರ್ಯದೊಡನೆ ನೋಡುತ್ತಿದ್ದನು. ಡಾಕ್ಟರು ಸಾಹೇಬು ಶ್ವಾಸವನ್ನು ತೆಗೆದುಕೊಳ್ಳುತ್ತಾ ರಿವಾಲ್ವಿಂಗ್ ಕುರ್ಚಿಯಲ್ಲಿ ಕುಳಿತು, ಅವನ ಕಡೆ ತಿರುಗಿ "ಉಫ್, ಅಬ್ಬಾ! ಈ ಟೆಲಿಫೋನಿಗೆ ಕೂಡ ಅವಕಾಶವನ್ನು ಕೊಡುವದಿಲ್ಲ. ಉ, ಮಹಾರಾಜ್! ಕಮಗೇನು ಖಾಯಿಲೆ? ಜ್ವರವೇ? ಕಮ್ಮಲಿಬೆಯೆ? ಎಲ್ಲಿಯಾದರೂ ನೋವಿದೆಯೇ? ಹೇಳಿ. ಒಂದು ಮಾತ್ರೆಯನ್ನು ಕೊಡುತ್ತೇನೆ, ಎಲ್ಲಾ ಗುಣವಾಗುವದು" ಎಂದನು.

ಆಗಂತುಕಮಹಾಶಯನು ಡಾಕ್ಟರವರನ್ನು ನೋಡುತ್ತಾ, "ಸಾವಿತ, ನಾನು ರೋಗಿಯಲ್ಲ! ನಾನು ಟೆಲಿಫೋನು ಕಂಪೆನಿ ನೌಕರನು ತಮ್ಮ ಟೆಲಿಫೋನಿಗೆ ಕನೆಕ್ಷನ್ ವೈರುಹಾಕಲು ಬಂದಿರುವೆನು" ಎಂದು ಗಟ್ಟಿಯಾಗಿ ಹೇಳಿದನು. (ಹಿ. ಮಾ)

ಸತ್ಯವಾದಿ

ಸಮಾಲೋಚನೆ

ಕಳಿದ ಮಹಾಯುದ್ಧದಲ್ಲಿ

ಬೆಲ್ಜಿಯಮ್ಮಿನವರು ಧೈರ್ಯದಿಂದ ಜರ್ಮನಿಯೊಂದಿಗೆ ಹೊಡೆದಾಡಿದ್ದಕ್ಕಾಗಿ ಎಲ್ಲರೂ ಅವರ ಶೌರ್ಯಕ್ಕೂ, ದೇಶವಾತ್ಸಲ್ಯಕ್ಕೂ ಸ್ತುತಿಸಿದರು. ಆ ಸಮಯದಲ್ಲಿ ಬೆಲ್ಜಿಯಮ್ಮಿಗೆ ಬ್ರಿಟನ್ನಿನ ಹಾಗೂ ಫ್ರಾನ್ಸಿನ ಸಹಾಯವಿತ್ತು. ಅಬ್ಸೀನಿಯವು ಈಗ ಯಾರ ಸಹಾಯವೂ ಇಲ್ಲದೆ ಹೊಡೆದಾಡುತ್ತಿದೆ. ಅಬ್ಸೀನಿಯವು ಯೂರೋಪಿನ ಭಾಗವಲ್ಲವಾದುದರಿಂದಲೂ, ಆ ದೇಶೀಯರೂ, ರಾಜನೂ ಕಪ್ಪು ಜನರಾದುದರಿಂದಲೂ, ಇವರ ಶೌರ್ಯ ಪರಾಕ್ರಮಗಳು ಪಶ್ಚಿಮ ದೇಶೀಯರಿಗೆ ಅತಿಶಯವಾಗಿ ಕಾಣಬರುವಲ್ಲ

ಅಬ್ಸೀನಿಯಾದಲ್ಲಿ ಗುಲಾಮವೃತ್ತಿ

ಇರುವದೆಂದೂ, ಅದನ್ನು ನಿರ್ಮೂಲ ಮಾಡಲು ಸಲವಾಗಿ ಇಟಲಿಯು ಆ ದೇಶದೊಂದಿಗೆ ಯುದ್ಧಮಾಡುತ್ತಿರುವುದೆಂದೂ ಇಟಲಿಯವರು ಹೇಳುವರಷ್ಟೆ. ಅಬ್ಸೀನಿಯಾದಲ್ಲಿ ಈಗ ಗುಲಾಮರೂ, ಗುಲಾಮರಲ್ಲದವರೂ ಇಬ್ಬರೂ ಇರುವರಷ್ಟೆ. ಅಬಿಸೀನಿಯವು ಇಟಲಿಯ ಸ್ವಾಧೀನವಾದಲ್ಲಿ ಅವಾಗ ಗುಲಾಮರಿರುವದಿಲ್ಲವೆಂದು ಅವರು ಹೇಳುವದು ಮಾತ್ರವೇ. ಆಗ ಎಲ್ಲರೂ ಇಟಲಿಯ ಗುಲಾಮರಾಗಬೇಕಾಗುವದು! ಈಗಿನಂತೆ ಗುಲಾಮರಿಲ್ಲದವರು ಯಾರೂ ಇರುವುದಿಲ್ಲ. ಈಗಿನ ಅಬ್ಸೀನಿಯವು ಗುಲಾಮರಿಂದ ಕೂಡಿದ್ದರೂ ಸಂಪೂರ್ಣವಾದ ಕಿತ್ತಳೆ ಹಣ್ಣಿನಂತಿರುತ್ತದೆ. ಆದರೆ ಅದು ಇಟಲಿಯ ವಶವಾದಲ್ಲಿ, ಮೇಲೆ ಸ್ವಾತಂತ್ರ್ಯತೆಯು ಕಾಣಬಂದರೂ, ರಸವಿಲ್ಲದೆ ಬತ್ತಿಹೋಗಿರುವ ಕಿತ್ತಳೆ ಹಣ್ಣಿನ ತೊಳೆಯಂತಾಗುವುದು.

ವರದಕ್ಷಿಣೆಗೆ ಸಲುವಾಗಿ

ಹತ್ತಾರು ವರ್ಷಗಳ ಹಿಂದೆ ಆಹುತಿಯಾದ ಬಂಗಾಳಿಯಾದ ವೀರಕುಮಾರಿ ಸ್ನೇಹಲತೆಯ ಚರಿತ್ರೆಯು ಇನ್ನೂ ಜನರ ಮನದಲ್ಲಿ ಅಳಿಸಿಹೋಗಿಲ್ಲ. ಆ ವೀರಕುಮಾರಿಯು, ತನ್ನ ತಂದೆತಾಯಿಗಳು ತನ್ನ ಮದುವೆಗೆ ವರದಕ್ಷಿಣೆಯ ಭಾರಿಯನ್ನು ತೃಪ್ತಿಪಡಿಸಲು ಹಣಶೇಖರಿಸುವುದಕ್ಕೆ ಅಸಾಧ್ಯವಾದುದನ್ನು ಕಂಡು ಸುಟ್ಟುಕೊಂದು ಆತ್ಮಹತ್ಯ ಮಾಡಿಕೊಂಡಳು. ಈಚೆಗೆ ಮೂರು ಮಂದಿ ದೊಡ್ಡ ಹುಡುಗಿಯರು ಕಮಗೆ ಅನುರೂಪವಾದ ವರ ದೊರೆಯದ ಕಾರಣ ಒಟ್ಟಾಗಿ ತೀರ್ಮಾನಿಸಿಕೊಂಡು ಆತ್ಮಹತ್ಯ ಮಾಡಿಕೊಂಡುದು ಅತಿ ದುಃಖದಾಯಕವಾದ ಮತ್ತು ಹೃದಯ ಛೇದಕವಾದ ವಿಷಯವೇ ಸರಿ. ಹುಡುಗಿಯರಿಗೆ ಇಂತಿಷ್ಟು ವರ್ಷದೊಳಗೇ ಮದುವೆ ಮಾಡಬೇಕೆಂದೂ ಆದರೆ ಹುಡುಗರು ಮದುವೆಗೆ ವಯಸ್ಸಿನ ನಿರ್ಣಯವೇ ಇಲ್ಲವೆಂದೂ ಹೇಳುವ ಮೂಲ ಜನರೇ ಇಂತಹ ಅನಾಹುತಕ್ಕೆ ಕಾರಣರು. ಹಿಂದುಗಳ ಹುಡುಗರಿಗೂ ಇಷ್ಟು ವರ್ಷದಲ್ಲಿಯೇ ಮದುವೆಯಾಗಬೇಕೆಂಬ ನಿರ್ಣಯವನ್ನು ನಾಡಿನ ಜನರು ಮುಂದಾಗಿ ಬರುವ ತನಕ ಇಂತಹ ಎಷ್ಟೋ ಕೇಡುಗಳಾಗುವವು.

ಮನುಷ್ಯನು ನಿಂತಿರುವಂತೆಯೇ ಪ್ರಾಣವನ್ನು ತೆಗೆಯುವಿಕೆ

ಸಿವಿಲ್ ಕೋರ್ಟು ಜವಾನನು ಕೋರ್ಟು ಕೆಲಸವನ್ನು ಜಾರೀ ಮಾಡಲು ತಾಸಿಗುಡ್ಡಗಳೊಳಗೆ ಹೋದನು. ನಿಬಿಡವಾದ ಅರಣ್ಯವನ್ನು ಬಹಳ ಕಷ್ಟದಿಂದ ದಾಟಿ ಜವಾನನು ಸಾಯಂಕಾಲವಾಗುವ ವೇಳೆಗೆ ಗಮ್ಯಸ್ಥಾನವನ್ನು ಸೇರಿದನು. ಬಿಲ್ಲು ವಿದ್ಯೆಯನ್ನು ಕಲಿತುಕೊಳ್ಳುತ್ತಿದ್ದ ಕೆಲವರನ್ನು ಕಂಡನು. ಸಮನ್ಸ್ ಜಾರಿಮಾಡಬೇಕಾದವನ ಹೆಸರನ್ನು ತಿಳಿಸಿ ಆತನ ಮನೆ ಎಲ್ಲಿರುವುದೆಂದು ಕೇಳಿದನು. ಜವಾನನು ಆ ಗ್ರಾಮವನ್ನು ಸೇರುವದಕ್ಕೂಳಗೆ ಸಮನ್ಸ್ ತೆಗೆದುಕೊಳ್ಳಬೇಕಾದವನು ಸತ್ತುಹೋಗಿದ್ದನು! ಆ ವಿಷಯವು ಕೋರ್ಟು ಜವಾನನಿಗೆ ತಿಳಿಯದು. ಜವಾನನು ಸತ್ತುಹೋದವನ ವಿಷಯದಲ್ಲಿ ವಿಚಾರಿಸುತ್ತಿದ್ದುದರಿಂದ, ಇವನು ಮನುಷ್ಯನು ಅಹುದೋ ಅಲ್ಲವೋ ಎಂದು ಗ್ರಾಮಸ್ಥರು ಸಂಶಯಪಟ್ಟರು. ಕೂಡಲೆ ಊರಿನವರೆಲ್ಲರನ್ನೂ ~~ವಜ್ರಕೆಗೊಳಿಸಿದರು~~. ಗ್ರಾಮದ ಯಜಮಾನ ಮತ್ತು ಮತಗುರುವಿನೊಂದಿಗೆ ಗ್ರಾಮಸ್ಥರೆಲ್ಲರೂ ಸೇರಿ ಸಭೆಮಾಡಿ ಜವಾನನು ಬರುವದು ಗ್ರಾಮಕ್ಕೆ ಅಶುಭಸೂಚನೆಯೆಂದೂ, ಅವನನ್ನು ನಿಂತಿದ್ದಂತೆಯೇ ದಹನಮಾಡಿದಲ್ಲಿ ಆ ದೋಷವು ಪರಿಹಾರವಾಗುವದೆಂದೂ. ಸಭೆಯವರು ತೀರ್ಮಾನ ಮಾಡಿದರು. ಜವಾನನು ನಿಸ್ಸಹಾಯನಾದನು. ಏನೂ ತೋಚದೆ ಆಲೋಚಿಸಿದನು. ಪ್ರಾಣದಾನಮಾಡಲು ಬೇಡಿಕೊಂಡನು. ಮತಗುರುವಿಗೆ ಇವನ ಮೇಲೆ ಕರುಣೆಹುಟ್ಟಲಿಲ್ಲ ಜವಾನನನ್ನು ನಿಲ್ಲಿಸಿ, ಅವನ ಸುತ್ತಲೂ ಒಣಗಿದ ಸೌದೆಯನ್ನು ಸರಿಯಾಗಿ ಇಟ್ಟು, ಬೆಂಕಿಹಚ್ಚಿದರು. ಗ್ರಾಮಸ್ಥರು ಚಿತೆಯ ಸುತ್ತಲೂ ನೃತ್ಯವನ್ನು ಮಾಡಿದರು. ಮಾರನೇ ದಿನ ಚಿತೆಯು ಹತ್ತಿರ ಯಾರೂ ಇರಲಿಲ್ಲ. ಜವಾನನು ಸತ್ತು ಹೋದಂತೆ ಭಾವಿಸಿ ಅವರು ಹೊರಟು ಹೋದರು. ಜವಾನನಿಗೆ ಕೊನೆಯ ಪ್ರಾಣವಿತ್ತು. ಉರಿಯ ಶಾಖಕ್ಕೆ ಕಣ್ಣಿನ ದೃಷ್ಟಿಯು ಹೋಯಿತು. ಅವನು ಓಡಲು ಪ್ರಯತ್ನಿಸಿ ಸ್ವಲ್ಪ ದೂರ ಹೋಗುವ ವೇಳೆಗೆ ಆಯಾಸದಿಂದ ಕೆಳಗೆ ಬಿದ್ದು ಸತ್ತುಹೋದನು. ಈ ಸಮಾಚಾರವನ್ನು ತಿಳಿದು ಬ್ರಿಟೀಷು ಮಿಲಿಟರಿದಳದವರು ಆ ಪ್ರಾಂತಕ್ಕೆ ಹೋಗಿರುವರು. ಆಹಾ! ಎಂತಹ ಮೂಢನಂಬಿಕೆ ಜನರಲ್ಲಿ, ಹಿಂದೆ ಕೆಲವರ ರಾಜ್ಯಭಾರದಲ್ಲಿ ನಿಂತಿದಂತೆಯೇ ಸುತ್ತಲೂ ಗೋಡೆಯನ್ನು ಕಟ್ಟಿ ಆ ರೀತಿಯಲ್ಲಿ ಪ್ರಾಣವನ್ನು ತೆಗೆಸುತ್ತಿದ್ದರಂತೆ. ಈ ವಿಷಯವು ಕಲ್ಪನೆ ಎಂದು ನಾವು ಭಾವಿಸುತ್ತಿದ್ದೆವು ಆಗಲಿ ಮೇಲ್ಕಂಡ ವಿಷಯದಿಂದ ಇನ್ನೂ ಅಂತಹ ಸ್ವಭಾವದ ಜನರು ಈಗಿನ ಕಾಲದಲ್ಲಿಯೂ ಇರುವ ವಿಷಯವು ತಿಳಿಯಬರುತ್ತದೆ. ಮನುಷ್ಯರಾಗಿ ಹುಟ್ಟಿ ಪಶುಗಳಿಗಿಂತ ಹೀನವಾಗಿ ವರ್ತಿಸುವುದು ಏಂದೂ ದೇಶೋದ್ಧಾರವೆಂದು ಹೇಳಲಾಗುವದಿಲ್ಲ.

ಇಬ್ಬರ ಹೆಸರು ಒಂದೇ ಆಗಿದ್ದುದರಿಂದ ಅನಾಹುತ!

ಷೇಕ್‌ಪುರ ಡಿಸ್ಟ್ರಿಕ್ಟಿನ ಜುಹಾರ್‌ಖಾನ ಸೆಕ್ಕಿಲಿನ ಉಪಾಧ್ಯಾಯರಾದ ಪಂಡಿತ ರಾಯುರ ರೆಂಬುವವನ್ನು ೨ ವರ್ಷಗಳ ಹಿಂದೆ ಕೆಲಸದಿಂದ ತೆಗೆದು ಹಾಕಿದರು. ಆದರೆ ಈಗ ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬಹುದೆಂದು ಈ ಕಾಲದ ಅವರಿಗುಂಟಾದ ಹಣದ ನಷ್ಟವನ್ನು ಪರಿಹಾರಮಾಡಲಾಗುವುದೆಂದು, ಸರ್ಕಾರದವರು ತಿಳಿಸಿದರು. ಈ ವಿಚಿತ್ರ ನಡವಳಿಕೆಗೆ ಕಾರಣವೇನೆಂದರೆ, ಇದೇ ಹೆಸರಿನ ಒಬ್ಬ ಕಾಂಗ್ರೆಸ್ ಕೆಲಸಗಾರನು ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದ್ದನು. ಹೆಸರು ಒಂದೇ ಆದರೆ ವ್ಯಕ್ತಿಗಳು ಬೇರೆ ಎಂಬುದನ್ನು ಕೂಡ ನೋಡದೆ, ಆ ಬಡ ಉಪಾಧ್ಯಾಯನನ್ನು ಕೆಲಸದಿಂದ ವಜಾ ಮಾಡಿದರು! ಆದರೆ ಈಚೆಗೆ ಅಸಹಕಾರ ಚಳವಳಿಯಲ್ಲಿ ಭಾಗವಹಿಸಿದವನು ಈತನಲ್ಲವೆಂದು ಗೊತ್ತಾದ ಮೇಲೆ ಸರ್ಕಾರದವರು, ಮೇಲ್ಕಂಡಂತೆ ಇತನಿಗೆ ಕೆಲಸ ಕೊಡಿಸಿದರು! ಇದೂ ಒಂದು ಸರ್ಕಾರದವರ ರೀತಿಯೋ ನೀತಿಯೋ.

ಚಿಂತಿಸಬೇಡಿ

ನಿಮ್ಮ ಅದೃಷ್ಟವು ಏನೋ ಹೇಗೋ ಎಂದು ವ್ಯರ್ಥಾ ಚಿಂತಿಸಬೇಡಿ. ಮುಂದೆ ಬರುವುದನ್ನು ತಿಳಿದುಕೊಂಡು ಸುಖಮಾರ್ಗವನ್ನು ಕಲ್ಪಿಸಿಕೊಳ್ಳಿರಿ. ನಿಮ್ಮ ಜಾತಕದ ನಕಲನ್ನೋ, ಹುಟ್ಟಿದ ಕಾಲವನ್ನೋ ಇಲ್ಲವೆ ನೀವು ಕಾಗದ ಒರೆಯುವ ಕಾಲವನ್ನೊ ತಿಳಿಸಿರಿ. ನಿಮಗೆ ಬೇಕಾದ ಐದು ಪ್ರಶ್ನೆಗಳನ್ನು ಕೇಳಿರಿ. ತೃಪ್ತಿಕರವಾಗಿ ಉತ್ತರವನ್ನು ತಿಳುಹಿಸುವೆವು ಫೀಜು ಒಬ್ಬರಿಗೆ ೧—೪—೦ ರೂಪಾಯಿ ಮಾತ್ರ

ರಾಜಕ ಜ್ಯೋತಿಷ್ಯರು,
೧೦೬ ಚಾಮರಾಜ ಅಗ್ರಹಾರ, ಮೈಸೂರು.

ನೀರಿನಿಂದ! ಹಣವನ್ನು ಶೇಖರಿಸಿ!

ನಿಮ್ಮ ಸೋಡಾ ಫೌಂಟನ್ನನ್ನು
ಈಗಲೇ
ಕೊಂಡುಕೊಳ್ಳಿ.

H. SASSEN & CO.,
15 Armenian Street, Post Box 163
G. T. MADRAS

Wanted

Agents with Pay and Allowances to canvass subscribers and advertisers for

SATYAVADI

Apply in person or through post to
The Manager,
Satyavadi Office, Satyavadi Buildings,
Chamarajpuram, Mysore.

ಜೀವಶಾಸ್ತ್ರದ ಕ್ರಮಗಳು ಮತ್ತು ಸತ್ತವರೊಡನೆ ಮಾತನಾಡುವ ಮಾರ್ಗಗಳು

(ಲೇಖಕರು—"ಕ" ಯವರು)

[ಸರ್ವಹಕ್ಕುಗಳನ್ನು ಲೇಖಕರು ಪಡೆದಿರುತ್ತಾರೆ]

ಯಾರಾದರೂ ನನಗೆ ಒಂದು ವಿಷಯವನ್ನು ಹೇಳಿದರೆ, ಆ ವಿಷಯವು ನಿಜವೇ, ಸುಳ್ಳೇ ಎಂಬುದನ್ನು ಪೂರ್ತಿ ತಿಳಿಯಲು ಪ್ರಯತ್ನಿಸುತ್ತೇನೆ. ಇದು ನನ್ನ ಸಹಜವಾದ ಗುಣವಾಗಿದೆ. ಹೀಗೆಯೇ ನನಗೆ ವೇದಾಂತ, ಅಥವಾ ಮತಸಂಬಂಧವಾದ ತತ್ವಗಳನ್ನು ಹೇಳಿದರೆ, ಅದು ನಿಜವೇ, ಯಾವ ಆಧಾರದ ಮೇಲೆ ನಿಜವೆಂದು ಹೇಳುತ್ತೀರಿ, ಎಂದು ನಾನು ಪ್ರಶ್ನೆ ಮಾಡುತ್ತೇನೆ. ಇಂತಹ ಪ್ರಶ್ನೆಗಳಿಗೆ ಸಾಧಾರಣವಾಗಿ, ಶಾಸ್ತ್ರಗಳ ಆಧಾರವನ್ನೂ, ಪ್ರಾಮುಖ್ಯ ಗ್ರಂಥಗಳಲ್ಲಿರುವ ಶ್ಲೋಕಗಳನ್ನೂ ಹೇಳುತ್ತಾರೆ. ಆ ಪುರಾಣದಲ್ಲಿ ಹಾಗೆ ಹೇಳಿದೆ, ಈ ಮಹಾ ಋಷಿಗಳು ಹೀಗೆ ಹೇಳಿದ್ದಾರೆ, ಆದುದರಿಂದ ಇದು ನಿಜವೆಂದು ಹೇಳುತ್ತಾರೆ. ಸಾಮಾನ್ಯವಾಗಿ ಎಲ್ಲಾ ಮತಗ್ರಂಥಗಳೂ, ಸ್ವರ್ಗ, ಪಾತಾಳಗಳೆಂಬ ಎರಡು ಲೋಕಗಳಿವೆ ಎಂದು ಹೇಳುತ್ತಾರೆ. ಈ ಸ್ವರ್ಗ ಪಾತಾಳಗಳು ಇರುವುದನ್ನು ನಿದರ್ಶಿಸಬಲ್ಲಿರಾ? ಎಂದು ಕೇಳಿದರೆ ಜೀವನ, ಭಗವದ್ಗ್ರಂಥಗಳಲ್ಲಿರುವ ಶ್ಲೋಕಗಳನ್ನು ಪಠಿಸುತ್ತಾರೆ. ಇನ್ನೂ ಕೆಲವರು ಅನುಮಾನ, ಉಪಮಾನ, ಪ್ರತ್ಯಕ್ಷ ಮೊದಲಾದ ಪ್ರಮಾಣಗಳನ್ನು ಹೇಳಿ ತಾವು ಹೇಳುವುದೇ ನಿಜವೆಂದು ಸಾಧಿಸುತ್ತಾರೆ. ಆದರೆ ಪ್ರತ್ಯಕ್ಷ ನಿದರ್ಶನವು ಎಲ್ಲೂ ಇರುವುದಿಲ್ಲ. ಆದರೆ ರಸಾಯನಶಾಸ್ತ್ರ ಮುಂತಾದ ಶಾಸ್ತ್ರಗಳಲ್ಲಿ ಹೀಗಿರುವುದಿಲ್ಲ. ಈಗ ನೀರು ಎರಡು ಪ್ರಾಣವಾಯುಗಳ ಸಂಯೋಗದಿಂದ ಉಂಟಾದುದೆಂದು ಹೇಳುತ್ತಾರೆ. (ಆಕ್ಸಿಜನ್ ಗೆ ಭಾಗ, ಹೈಡ್ರೋಜನ್ ಗೆ ಭಾಗ). ಇದು ಹೇಗೆಂದು ಕೇಳಿದರೆ, ಅವರು ನಮ್ಮನ್ನು ಪ್ರಯೋಗ ಶಾಲೆಗೆ (ಲ್ಯಾಬರೋಟರಿ) ಕರೆದುಕೊಂಡು ಹೋಗಿ, ನಮ್ಮ ಮುಂದೆಯೇ ಆ ಎರಡು ವಾಯುಗಳನ್ನೂ ಸಂಯೋಗವಾಗುವಂತೆ ಮಾಡಿ ಅದರಿಂದ ಜಲವು ಉತ್ಪತ್ತಿಯಾಗುವುದನ್ನು ನಮ್ಮ ಕಣ್ಣಮುಂದೆಯೇ ತೋರಿಸುತ್ತಾರೆ. ಇದೇ ಪ್ರತ್ಯಕ್ಷ ನಿದರ್ಶನವು. ಇಂತಹ ನಿದರ್ಶನಗಳು ಮುಂದೆ ಯಾವ ವಾದವೂ ನಿಲ್ಲಲಾರದು. ಜೀವಶಾಸ್ತ್ರದ ತತ್ವಗಳು ಇಂತಹ ಪ್ರತ್ಯಕ್ಷ ನಿದರ್ಶನಗಳ ಆಧಾರ ಉಳ್ಳವುಗಳು. ಬರೀ ಗ್ರಂಥಗಳು ಅಥವಾ ಶ್ಲೋಕಗಳ ಆಧಾರ ಉಳ್ಳವುಗಳಲ್ಲ. ಇದನ್ನಾರಿಗಾದರೂ ಹೇಳಿರಿ ಜೀವಶಾಸ್ತ್ರದ ತತ್ವಗಳನ್ನು ನಿದರ್ಶಿಸಬಲ್ಲಿರಾ ಎಂದು ಕೇಳಿದರೆ, ಪ್ರತ್ಯಕ್ಷವಾಗಿ ನಿದರ್ಶಿಸಬಲ್ಲೆವು. ಹೆಜ್ಜೇಕಿ ನೀನೇ ನಿನ್ನ ಜೀವನ ಘಟನೆಗಳಲ್ಲಿ ತಂದು ಪ್ರತ್ಯಕ್ಷವಾಗಿ ನೀವೇ ನಿದರ್ಶಿಸಿಕೊಳ್ಳುವಿರಿ ಎಂದು ಉತ್ತರ ಹೇಳಬೇಕಾಗುತ್ತದೆ. ಜೀವಸಂಭಾಷಣಾ ಮಾರ್ಗಗಳೇ ಈ ಪ್ರತ್ಯಕ್ಷಕ್ಕೆ ನಿದರ್ಶನಗಳು. ಇದರ ಜೊತೆಗೆ, ಛಾಯಾಗ್ರಾಫಿಯ ಯಂತ್ರಗಳಿಂದ ತೆಗೆದ ಸತ್ತವರ (ಸೂಕ್ಷ್ಮ ದೇಹದ) ಚಿತ್ರಗಳೂ, ನಿದರ್ಶನಗಳಾಗಿವೆ. ಇನ್ನೂ ಕೆಲವು ಬಹು ವಿಶೇಷಕರವಾದ ನಿದರ್ಶನಗಳಿರುವುವು. ಇವೆಲ್ಲಕ್ಕಿಂತ ಅತಿ ಮುಖ್ಯವಾದುದು, ಯಾವುದೆಂದರೆ, ಸತ್ತವರು ನಮ್ಮ ದೃಷ್ಟಿಗೋಚರವಾಗಿ ನಮ್ಮಂತೆಯೇ ಮಾತನಾಡುವುದು, ಸ್ಪರ್ಶಚಲನೆಗಳನ್ನು ಮಾಡುವುದು. ಇದು ಅವರಿಗೆ ಸಹಜವಾದ ಸ್ಥಿತಿಯಲ್ಲವಾದ್ದರಿಂದ, ಸತ್ತವರು ಕೆಲವು ನಿಮಿಷಗಳು ಮಾತ್ರವೇ ಈ ರೀತಿ ಸ್ಥೂಲಶರೀರವುಳ್ಳವರಂತೆ ನಮ್ಮ ದೃಷ್ಟಿಗೋಚರವಾಗಬಲ್ಲರು. ಜೀವಸಂಭಾಷಣಾ ಮಾರ್ಗಗಳೆಲ್ಲಾ, ಅತ್ಯಂತ ಸುಲಭವೂ, ಪ್ರಜಾಕೋಟಿಯಲ್ಲಿ ಪ್ರತಿಯೊಬ್ಬರೂ, ಅಭ್ಯಾಸಮಾಡಲು ಯೋಗ್ಯವಾದುದೂ ಆದ ಮಾರ್ಗವೆಂದರೆ, ಸ್ವೇಶ್ಚಾಲಿಪಿ ಮಾರ್ಗವು. ಈ ಮಾರ್ಗವನ್ನು ಪ್ರತಿಯೊಬ್ಬರೂ ನಿರ್ಭಯತೆಯಾಗಿ ಅಭ್ಯಾಸಿಸಬಲ್ಲರು. ಈ ಮಾರ್ಗವು ಕೆಲವರಿಗೆ ಅತಿ ಶೀಘ್ರವಾಗಿ ಸಿದ್ಧಿಸುವುದು. ಕೆಲವರಿಗೆ ಬಹುಕಾಲವಾದ ಮೇಲೆ ಸಿದ್ಧಿಸುವುದು. ಇದರ ಕ್ರಮವು ಹೇಗೆಂದರೆ—ಒಂದು ಸಣ್ಣ ಮೇಜಿನ ಮೇಲೆ, ಒಂದು ಕಾಗದವನ್ನು, ಅಲುಗಾಡದಂತೆ ಮಟ್ಟವಾಗಿ ಹಾಸಿಡಬೇಕು. ಜೀವಸಂಭಾಷಣ ಮಾಡಬೇಕೆನ್ನುವರು, ಆ ಕಾಗದದ ಮೇಲೆ ಒಂದು ಸೀಸದ ಕಡ್ಡಿಯನ್ನು ನೇರವಾಗಿ ಹಿಡಿದುಕೊಳ್ಳಬೇಕು. ಸೀಸದ ಕಡ್ಡಿಯು ಕಾಗದದ ಮೇಲೆ ಊರಿರಬೇಕು. ಕೈ ಅಲುಗಾಡಿದರೆ, ಕಾಗದದ ಮೇಲೆ ಗುರ್ತುಗಳು ಬೀಳುವಂತಿರಬೇಕು. ಹಾಗೆಯೇ ಸ್ವಲ್ಪ ಹೊತ್ತು ಸೀಸದ ಕಡ್ಡಿಯನ್ನು ಹಿಡಿದು ಕುಳಿತರೆ, ಕೈ ತನ್ನಷ್ಟಕ್ಕೆ ತಾನೇ ಚಲಿಸಲು ಪ್ರಾರಂಭಿಸುವುದು. ಈ ಮಾರ್ಗವನ್ನು ಅನುಸರಿಸುವಾಗ ನಾವು ಕೈಮೇಲೆ ಯಾವ ಭಾರವನ್ನೂ ಬಿಡಬಾರದು, ಸುಲಭವಾಗಿ ಸುಖಾಸೀನರಾಗಿ ಕೈಯಲ್ಲಿ ಸೀಸದ ಕಡ್ಡಿಯನ್ನು ಹಗುರವಾಗಿ ಹಿಡಿದಿರಬೇಕು ಮತ್ತು ಬೇಕಾಗಿ ನಾವೇ ಕೈಯನ್ನು ಚಲಿಸಬಾರದು. ಈ ಅಭ್ಯಾಸವನ್ನು ಸಾಯಂಕಾಲ ಸೂರ್ಯಾಸ್ತಮಾನವಾದ ಮೇಲೆ ಕತ್ತಲೆಯು ಮೂಡುತ್ತಿರುವ ಸಮಯದಲ್ಲಿ, ಮಾಡಬೇಕು. ಏತಕ್ಕೆಂದರೆ, ಈ ಸಮಯದಲ್ಲಿ ಸೂಕ್ಷ್ಮಶರೀರವುಳ್ಳ ಸತ್ತವರು ಸುಲಭವಾಗಿ ಚಲಿಸಬಲ್ಲರು. ನಮ್ಮ ಸೂಕ್ಷ್ಮಶರೀರವೂ ಕೂಡ ಸ್ವಲ್ಪ ಚೇತನವುಳ್ಳದಾಗಿರುತ್ತದೆ. ಈ ಮಾರ್ಗವನ್ನು ಅಭ್ಯಾಸ ಮಾಡುವಾಗ ನಾವು ಯಾರೊಡನೆ ಸಂಭಾಷಿಸಲು ಕಾತುರರಾಗಿರುವೆವೋ ಅವರನ್ನೇ ಕುರಿತು ಯೋಚಿಸುತ್ತಿರಬೇಕು. ಮನಸ್ಸಿನಲ್ಲಿ ಅವರನ್ನು ಕೂಗಿ ಕರೆಯುತ್ತಿರಬೇಕು. ಮುಖ್ಯವಾಗಿ ನಮಗೂ ನಾವು ಮಾತನಾಡಬೇಕೆಂದಿರುವ ಸತ್ತವರಿಗೂ ಪ್ರೇಮಾನುಬಂಧವಿರಬೇಕು. ಒದಗಿದ್ದಾಗ ನನಗೆ ಪರಿಚಯವಿಲ್ಲದವರನ್ನು ನಾವು ಕರೆದರೆ ಅವರು ನೆನ್ನೊಡನೆ ಹೇಗೆ ಸಂಭಾಷಿಸಬಲ್ಲರು? ಈ ಅಭ್ಯಾಸವನ್ನು ಪ್ರತಿದಿವಸವೂ ಒಂದೇ ಸ್ಥಳದಲ್ಲಿ ಮಾಡುವುದು ಉತ್ತಮ. ಒಂದು ಶುಭ್ರವಾದ ಕೊಠಡಿಯಲ್ಲಿ, ದೇವರ ಪಟವನ್ನಿಟ್ಟು, ಪರಿಮಳದ್ರವ್ಯಗಳನ್ನಿಟ್ಟು, ಸುವಾಸನೆಯುಳ್ಳ ಧೂಪವನ್ನು ಹಾಕಬೇಕು. ಈ ಕೊಠಡಿಯನ್ನು ಪ್ರವೇಶಿಸುವಾಗ ನಾವು ಶಾಂತಚಿತ್ತರಾಗಿ ಶುದ್ಧಮನಸ್ಕರಾಗಿರಬೇಕು. ಅಭ್ಯಾಸ ಸಮಯದಲ್ಲಿ ದೇವರನ್ನು ಸ್ಮರಿಸುತ್ತಿರಬೇಕು. ಪ್ರತಿಯೊಬ್ಬರನ್ನೂ ನಿಜವಾದ ಪ್ರೀತಿಯಿಂದ ಕರೆಯುತ್ತಿರಬೇಕು. ಭಯಪಡಬಾರದು, ಶಾಂತರಾಗಿ ನಿರ್ಭಯದಿಂದ ಸಂತೋಷಚಿತ್ತರಾಗಿರಬೇಕು. ಹೀಗೆ ಮಾಡಿದರೆ ಮೊದಲು, ಮೊದಲು ಕಾಗದದ ಮೇಲೆ ಬರಿಯ ಗೀರುಗಳು ಕಾಣಬರುವುವು. ಕ್ರಮೇಣ ಅಕ್ಷರಗಳಾಗುತ್ತಾ ಬರುವುವು. ಹೀಗೆಯೇ ಅಭ್ಯಾಸ ಮಾಡುತ್ತಾ ಬಂದರೆ ಕೊನೆಗೆ ಮಾತುಗಳೂ; ವಾಕ್ಯಗಳೂ ಆಗುವುವು. ಹೀಗೆ ಬರೆಯುವಾಗ, ಕೈಯನ್ನು ಹಗುರವಾಗಿಟ್ಟಿರಬೇಕು ಮುಖ್ಯವಾದ ಅಂಶವೇನೆಂದರೆ, ಅದು ತನ್ನಷ್ಟಕ್ಕೆ ತಾನೇ ಚಲಿಸಬೇಕು. ಈ ಮಾರ್ಗವು ಸಿದ್ಧಿಸಿರುವವರ ಕೈಗಳು, ಸಂಭಾಷಣಾ ಕಾಲದಲ್ಲಿ ಅವರ ಸ್ವಾಧೀನವಿಲ್ಲದೆ, ತಮ್ಮಷ್ಟಕ್ಕೆ ತಾವೇ ಬರೆಯುವುವು. ಇದರಲ್ಲಿರುವ ಮುಖ್ಯ ತತ್ವ ವೇನೆಂದರೆ, ನಮ್ಮ ಸೂಕ್ಷ್ಮದೇಹದ ಕೈಯನ್ನು ಹಿಡಿದು ಸತ್ಕಾರ್ಯವನ್ನು ತನ್ನ ಸೂಕ್ಷ್ಮ ಕೈಯಿಂದ ಬರೆಯಿಸುವನು. ಹೀಗೆ ನಮ್ಮ ಸೂಕ್ಷ್ಮದೇಹದ ಹಸ್ತವು ಚಲಿಸುವುದರಿಂದ ಸ್ಥೂಲವಾದ ಹಸ್ತವೂ ಕೂಡ ಅದೇ ರೀತಿಯಲ್ಲಿ ಚಲಿಸಕೊಡಗುವುದು. ಈ ಚಲನೆಯು ನಮ್ಮ ಸಾಧಾರಣ ಜೀವನದ ವ್ಯವಹಾರಗಳಲ್ಲಿ ನಮಗೆ ತಿಳಿಯುವುದಿಲ್ಲ. ಮೇಲೆ ಹೇಳಿರುವಂತೆ ಕುಳಿತು ಅಭ್ಯಾಸಮಾಡಿದರೆ, ಈ ಸ್ವೇಶ್ಚಾಚಲನೆಯು ನಮಗೆ ಸ್ಪಷ್ಟವಾಗಿ ಕಾಣುವುದು ನಾವು ಎಂದೂ ಈ ಅಭ್ಯಾಸವನ್ನು ಮಾಡಿರುವುದಿಲ್ಲವಾದುದರಿಂದ, ಸತ್ತವರಿಗೆ, ನಮ್ಮ ಕೈಯನ್ನು ಅವರ ಇಷ್ಟಾನುಸಾರವಾಗಿ ಚಲಿಸಿ ಅಕ್ಷರಗಳನ್ನು ಅಥವಾ ವಾಕ್ಯಗಳನ್ನು ಬರೆಯಿಸುವುದು, ಬಹಳ ಕಷ್ಟಕರವಾಗಿರುವುದು. ಅವರು ಕ್ರಮೇಣ, ನಾವು ಈ ರೀತಿಯಲ್ಲಿ ಕಲ್ಪಿಸಿಕೊಡುವ ಅವಕಾಶದಲ್ಲಿ, ಅಭ್ಯಾಸ ಮಾಡುವರು. ಇದರಿಂದ ಜೀವಸಂಭಾಷಣೆಯು ಸುಲಭವಾಗುತ್ತಾ ಬರುವುದು. ಈ ಮಾರ್ಗವು ಸಂಪೂರ್ಣವಾಗಿ ಸಿದ್ಧಿಸಬೇಕಾದರೆ ಸಾಧಾರಣವಾದ ಒಂದು ತಿಂಗಳ ಕಾಲ ಹಿಡಿಯುವುದು. ಈ ಸ್ವೇಚ್ಛಾಲಿಪಿ ಮಾರ್ಗದ ವಿಷಯದಲ್ಲಿ ಒಂದು ಅಂಶವನ್ನು ಮರೆಯಬಾರದು. ಅದೇನೆಂದರೆ, ಈ ಮಾರ್ಗದಿಂದ ಸಂಭಾಷಿಸಲು — ಸತ್ತವರೂ ಕೂಡ ಅವರು ಬದುಕಿದ್ದಾಗ ಓದುಬರಹ ತಿಳಿದವರಾಗಿರಬೇಕು. ಹೀಗೆ ಓದುಬರಹ ತಿಳಿದವರು—ಸತ್ತಿರುವ ಬಂಧುಗಳಲ್ಲಿ ಒಬ್ಬರಲ್ಲ ಒಬ್ಬರು ಇರಲೇಬೇಕು—ಅವರೊಡನೆ ಮೊದಲು ಈ ಸ್ವೇಚ್ಛಾಲಿಪಿ ಮಾರ್ಗದಲ್ಲಿ ಅಭ್ಯಾಸಮಾಡಿ ಸಿದ್ಧಿಯನ್ನು ಪಡೆದನ್ನೇ ಆದರೆ, ಅಂಥವರ ಮೂಲಕ ನಮಗೆ ಬೇಕಾದವರೊಡನೆ ಮಾತನಾಡಬಹುದಾಗಿದೆ. ನಾವು ಕೇಳುವ ಪ್ರಶ್ನೆಗಳಿಗೆ ಉತ್ತರಗಳನ್ನು ಅವರಿಂದ ಕೇಳಿ ತಿಳಿದು ಕಾಗದದ ಮೇಲೆ ಬರೆಯಿಸುವರು. ಈ ಮಾರ್ಗದಲ್ಲಿ ಪ್ರಶ್ನೆಗಳನ್ನು ಮನಸ್ಸಿನಲ್ಲಿ ಕೇಳಿದರೆ, ಕಾಗದದ ಮೇಲೆ ಹಸ್ತವು ಉತ್ತರಗಳನ್ನು ಬರೆಯುತ್ತದೆ. ಆದರೆ, ನಮ್ಮ ಹಸ್ತವೇ ಈ ಉತ್ತರವನ್ನು ಬರೆಯುತ್ತಿದೆಂದು ತಿಳಿಯಬಾರದು ಯಾವಾಗಲೂ, ಸತ್ತವರು ತಮ್ಮ ಸೂಕ್ಷ್ಮದೇಹದ ಹಸ್ತದಿಂದ ನಮ್ಮ ಕೈಯನ್ನು ಹಿಡಿದು ಬರೆಯಿಸುವರೆಂಬುದನ್ನು ಮರೆಯಬಾರದು. ಈ ಸ್ವೇಚ್ಛಾಲಿಪಿ ಮಾರ್ಗಕ್ಕಿಂತಲೂ ಇನ್ನೂ ಸುಲಭವಾಗಿಯೂ ಜಾಗ್ರತೆಯಾಗಿಯೂ ಸಿದ್ಧಿಸುವ ಮಾರ್ಗವು ಬೇರೊಂದಿರುವುದು. [ಮುಂದುವರಿಯುವುದು

ವೃತ್ತಾಂತಗಳು.

ಮು॥ ಸ.ಭೋಸ್‌ಚಂದ್ರ ಬೋಸರವರು ಮುಂದಿನ ಕಾಂಗ್ರೆಸ್ ಸೆಕ್ರೆಟರಿಯವರಾಗುವರೆಂದು ತಿಳಿಯುಬಂದಿದೆ.

ಲಾರ್ಡ್ ಎಡ್ವರ್ಡ್‌ರವರ ರಾಜ್ಯಾರೋಹಣ ಉತ್ಸವವು ೧೯೩೭ ನೇ ಮೇ ತಿಂಗಳಲ್ಲಿ ಜರುಗುವುದ. ಮುಂದೆ ಹಿಂದುಸ್ಥಾನಕ್ಕೆ ಬರುತ್ತಾರೆಂದು ತಿಳಿದುಬಂದಿದೆ.

ದೆಲ್ಲಿಯ ಒಂದು ವಿದ್ಯಾಲಯದ ವಿದ್ಯಾರ್ಥಿಗಳಿಗೆ ವ್ಯಯಾಮ ಶಿಕ್ಷಣ ಕೊಡಲು ಜಪಾನಿನ ಸುಸ್ಪ್ರಸಿದ್ಧ ವ್ಯಾಯಾಮ ಶಿಕ್ಷಕರೊಬ್ಬರನ್ನು ಕರಸುವರೆಂದು ತಿಳಿಯಬಂದಿದೆ.

ಅವಾಡಿ ವೆಸ್ಟು ಅಂಬಕ್ಕೂರ ಸ್ಟೇಷನುಗಳಲ್ಲಿ ಎಂ. ಎಸ್. ಎಂ. ರೈಲ್ವೆ ಸಿಬಂದಿಯವರು ಟಿಕೆಟ್ ಚೆಕ್ ಮಾಡಿ ನೋಡಿದಲ್ಲಿ ೧೪೨ ಮಂದಿ ಪ್ರಯಾಣಿಕರಿಗೆ ಟಿಕೆಟ್ ಇರಲಿಲ್ಲ.

ಕೆಲವು ಕಾಲದಿಂದ ನಾಗಪುರದಲ್ಲಿ ವಾಸಿಸುತ್ತಿರುವ ಗಾಂಧಿಜಿಯವರ ಹಿರಿಯಮಗ ಹೀರಾಲಾಲ್ ಗಾಂಧಿಯವರು, ತಾವು ಕ್ರೈಸ್ತ ಮತವನ್ನು ಅವಲಂಬಿಸುವುದಾಗಿ ಪ್ರಕಟಿಸಿರುತ್ತಾರೆ.

ಬರವ ಒಡ್ಡಿಟಿನಲ್ಲಿ ಉಳಿತಾಯವಾಗುವ ಸಂದರ್ಭದಲ್ಲಿ, ಅರ್ಧಾಣಿಯ ಕಾರ್ಡು, ೧ ಆಣೆಯ ಕವರುಗಳನ್ನು ಜಾರಿಗೆ ತರಬೇಕೆಂದು, ಕರಾಚಿಯ ಹಿಂದೀ ವರ್ತಕಸಂಘವು ಇಂಡಿಯಾ ಸರ್ಕಾರಕ್ಕೆ ಸೂಚಿಸಿದೆ.

ದರ್ಭಂಗದಲ್ಲಿ ಭಾಗವತಿ ನದಿ ತೀರದಲ್ಲಿ ನೆಲವನ್ನು ಅಗೆಯುವಾಗ ಒಂದು ದೊಡ್ಡ ಬುದ್ಧನ ವಿಗ್ರಹವೂ, ೬ ಅಡಿ ಉದ್ದವುಳ್ಳ ವಿಷ್ಣುವಿನ ವಿಗ್ರಹವೂ, ಮತ್ತೊಂದು ಸೂರ್ಯನ ಸುಂದರವಾದ ವಿಗ್ರಹಗಳು ಸಿಕ್ಕಿವೆ.

ರಾಜಕೋಟೆದಲ್ಲಿ ಬಾವಾಜೀವು ಗರ್ಲ್ ಸ್ಕೂಲಿನಲ್ಲಿನ ತೊಲೆಯು ಅಕಸ್ಮಾತ್ತಾಗಿ ಮುರಿದು ಕೊಂಡು ಬೀಳಲು ನರ್ಮದಾಬಾಯಿ ಎಂಬ ಹುಡುಗಿಗೂ ಮತ್ತು ೪ ಹೆಣ್ಣುಹುಡುಗಿಯರಿಗೂ ಬಹಳ ಅಪಾಯವಾದ್ದರಿಂದ ಆಸ್ಪತ್ರೆಗೆ ಕಳಹಿಸಲ್ಪಟ್ಟರು.

* *

ಶಾರದಾ ಆಕ್ಟಿನಿಂದ ಹೊರಗಾಗಲು ಕೈರ್ ಪುರದ ಸಂಸ್ಥಾನದ ಬಳಿ ಹೊಕ್ಕ ನಡೆಸಿದ. ಹೊರ ಪ್ರಾಂತಗಳವರ, ಕಳೆದ ೧೧ ವರ್ಷದ ಮದುವೆಯ ಸಂಖ್ಯೆ ಸುಮಾರು ೬೦೦. ಪ್ರತಿ ವರನಿಂದ ವಧೂವರ ಕಡೆಯಿಂದ ಒಟ್ಟು ೨೦೦ ರೂಪಾಯಿಗಳ ತೆರಿಗೆಯು ಸಲ್ಲಬೇಕಾದ.ದರಿಂದ ಆ ಸರ್ಕಾರಕ್ಕೆ ಕಳೆದ ವರ್ಷ ಇದರಿಂದ ೧೬ ಸಾವಿರ ರೂಪಾಯಿಗಳು ಉತ್ಪತ್ತಿಯಾಯಿತು.

ಪೃಥ್ವೀ ಪರ್ಯಟಕ್ಕಾಗಿ ೩೮೦ ಜನ ಪ್ರವಾಸಿಕರು ಹೊರಟಿದ್ದು ಈಗ ಬೊಂಬಾಯಿಗೆ ಬಂದಿರುವರು. ಅವರಲ್ಲಿ ಬಹಳ ಜನರು ಅಮೇರಿಕದ ಕೋಟ್ಯಾಧೀಶರಿರುವರು. ಅವರ ಹಡಗು ಪೃಥ್ವಿಯಲ್ಲಿಯ ಹಡಗುಗಳಲ್ಲಿ ಬಹಳ ಅನುಕೂಲವೂ ಸುಂದರವೂ ಇದೆ. ಅದರ ಉದ್ದ ೭೫೫ ಫೂಟ, ಅಗಲ ೯೭ ಫೂಟು ಇದೆ. ಎರಡು ದೊಡ್ಡ ಈಜುವ ಹೊಂಡಗಳು, ವ್ಯಾಯಾಮಶಾಲೆ, ಟೆನಿಸ್ ಕೋರ್ಟು ಮುಂತಾದವು ಇವೆ ಒಂದುವಾರ ಇಲ್ಲಿ ಇದ್ದು ಜಪಾನಿಗೆ ಪ್ರಯಾಣ ಮಾಡುವರು.

ಕಲ್ಕತ್ತೆಯ ಕಾರ್ಪೋರೇಶನಿನಲ್ಲಿ ಇಂಜನಿಯರ ಶಿಫಾರಸಿನಂತೆ ತಿಲ್ಹಾಲದಲ್ಲಿ ಹರಿಜನರ ವಸತಿಗಾಗಿ ೨,೪೬,೦೦೦ ರೂಪಾಯಿಗಳನ್ನು ಮಂಜೂರು ಮಾಡಿದೆ. ಇದರಲ್ಲಿ ಭೂವಿಯ ಖರೀದಿಗಾಗಿ ೪೬,೦೦೦ ರೂಪಾಯಿಗಳು, ಕಟ್ಟಡಗಳಿಗಾಗಿ ೧॥ ಲಕ್ಷ ರೂ.

ತಾ॥ ೧೧-೨-೩೬ ರ ಸಾಯಂಕಾಲ ಭಯಂಕರ ಆಲಿಕಲ್ಲಿನ ಮಳೆಯಾಗಿ ಗುರಸಿಂದ ೨ ಮೈಲಿ ದೂಂದಲ್ಲಿ ಆಲಿಕಲ್ಲಿನ ಮೂರು ಒಂಡೆಗಳು ಬಿದ್ದಿದ್ದು ಬಹಳ ಆಶ್ಚರ್ಯಕರವಾಗಿದೆ. ೧ ನೇದು ೨೪ ಫೂಟ ಉದ್ದ ೧೬ ಫೂಟ ಅಗಲ ೮ ಫೂಟ ಎತ್ತರವಾದದ್ದು. ೨ ನೇದು ೧೮ ಫೂಟು ಉದ್ದ, ೧೩ ಫೂಟು ಅಗಲ, ೬ ಫೂಟು ಎತ್ತರವಾದದ್ದ ೩ ನೇದು ೧೩ ಫೂಟು ಉದ್ದ ೮॥ ಫೂಟು ಅಗಲ ೩॥ ಫೂಟು ಎತ್ತರವಾದದ್ದು. ಇದನ್ನು ನೋಡಿ ಜನರು ಆಶ್ಚರ್ಯಭರಿತರಾದರು.

ನೈಜಾಮರ ರಜತಮಹೋತ್ಸವವನ್ನು ಮುಂದಿನ ಅಕ್ಟೋಬರ್ ತಿಂಗಳಲ್ಲಿ ನಡೆಸಲು ನಿಶ್ಚಯಿಸಲ್ಪಟ್ಟಿದೆ.

ಡಾ॥ ಅಂಬೇಡ್ಕರರು ಹಿಂದೂಮತವು ಒಂದು ಜಾಡ್ಯವೆಂದು, ಅದನ್ನು ಕಾಲರಾ, ಸಿಡುಬು, ಮುಂತಾದ ವ್ಯಾಧಿಗಳಿಗೆ ಹೋಲಿಸಿರವರು. ಈ ಜಾಡ್ಯಗಳ ಬಾಧೆಯನ್ನು ತಪ್ಪಿಸಿಕೊಳ್ಳಲೆಳಸಿದವರು ಹೇಗೆ ವರ್ತಿಸುವರೋ ಹಾಗೆಯೇ ಹಿಂದೂಮತವನ್ನು ಬಿಡತಕ್ಕದ್ದೆಂದು ಅಭಿಪ್ರಾಯಪಟ್ಟಿರುವರು ಯಾರು ಏನೆಂದರೂ ಹಿಂದೂಮತಕ್ಕೆ ಎಂದೂ ಯಾವ ಬಗೆಯ ಭಂಗವೂ ಪ್ರಾಪ್ತವಾಗಲಾರದು.

ನಾಗಪುರದಲ್ಲಿಯ ಸಂಘಟಕರ್ತರು ಈಗಿನವರಿಗೆ ಅನುಕೂಲವಾದ "ಮಾನವ ಮನುಸ್ಮೃತಿ" ಯೊಂದನ್ನು ಪ್ರಚುರಪಡಿಸಲು ಯೋಚಿಸುತ್ತಿರುವರು.

ದಕ್ಷಿಣ ಆಫ್ರಿಕಾದಲ್ಲಿ ಯುನೈಟೆಡ್ ಕಾಂಗ್ರೆಸ್ಸಿನಲ್ಲಿ, ಕಪ್ಪುಬಣ್ಣದವರು ಯಾರಾದರೂ ಶ್ವೇತವರ್ಣದವರನ್ನು ವಿವಾಹಮಾಡಿಕೊಂಡಲ್ಲಿ ಅದನ್ನು ತಪ್ಪಾಗಿ ಭಾವಿಸಬೇಕೆಂಬ ತೀರ್ಮಾನವನ್ನು ಪ್ರತಿಪಾದನೆ ಮಾಡಿದ್ದಿಕ್ಕೆ, ಜಂಟೀರಿಯಂ ಮಂತ್ರಿಯು ಇದನ್ನು ಕುರಿತು ವಿಚಾರಿಸಿಕಕ್ಕೆ ಚರ್ಚೆಯನ್ನು ತೆಗೆದುಕೊಳ್ಳುವದಾಗಿ ತಿಳಿಸಿದರು. ಜರ್ಮನಿಯಲ್ಲಿ ನಾಜಿಗಳು ಯಹೂದ್ಯರನ್ನು ಹಿಂಡಿಸುವಂತೆ ದಕ್ಷಿಣ ಆಫ್ರಿಕಾದಲ್ಲಿ ಕಪ್ಪು ಬಣ್ಣದವರನ್ನು ಬಾಧಿಸುವರು.

ಮೆಡಿಟರೇನಿಯನ್ ಪ್ರಾಂತ್ಯದಲ್ಲಿ ಇಂಗ್ಲೆಂಡು ಇಟಲಿಗೆ ಪ್ರತಿಕೂಲವಾಗಿ ನಡೆಸುವ ಕಾರ್ಯದಲ್ಲಿ ಸ್ಪೇನ್ ಸಹಾಯ ಮಾಡುವದಾಗಿ ತಿಳಿಯಬಂದಿದೆ.

ಕೊಯಮತ್ತೂರಿನಲ್ಲಿ ಕೆಲಸಸಿಗದೆ ರಾಮು ಸ್ವಾಮಿ ನಾಯಿಡು ಎಂಬಾತನು ತನ್ನ ಹೆಂಡತಿಯ ಒಡವೆಗಳನ್ನು ಮಾರಿ ಕಾಲಕ್ಷೇಪ ಮಾಡುತ್ತಿದ್ದನು. ಇದಕ್ಕೆ ಕೃಷ್ಣಸ್ವಾಮಿ ನಾಯಿಡು ಎಂಬಾತನು ಅಡ್ಡಬರಲು ಆತನನ್ನು ತಿವಿದು ಕೊಂದುಹಾಕಿದನು. ನೋಡಿ, ನಿಗುದ್ಯೋಗತನದ ಪರಿಣಾಮವು ಎಂತಹುದೊ!

ಸ್ಕಾಟ್‌ಲಂಡಿನಲ್ಲಿ ಒಬ್ಬ ಯುವಕನ ಕಿವಿಗೆ ಅಪಾಯವಾದಾಗ, ಯಾರಾದರೂ ಕಿವಿಯನ್ನು ಕೊಯ್ದು ಕೊಟ್ಟಲ್ಲಿ ಅದನ್ನು ಯುವಕನಿಗೆ ಸೇರಿಸುವದಾಗಿ ಡಾಕ್ಟರ್ ಸರ್ ಹರಾಲ್ಡ್ ಗಿಲ್ಸ್ ರವರು ಹೇಳಲು, ಆತನ ಅಜ್ಜಿಯು ತನ್ನ ಕಿವಿಯನ್ನು ಕೊಯ್ಸಿಕೊಳ್ಳಲು ಒಪ್ಪಿದ್ದರಿಂದ ಆ ಕಿವಿಯನ್ನು ಆ ಯುವಕನಿಗೆ ಸೇರಿಸಿದರು!

'ಕರೆಂಟ್ ಹಿಸ್ಟರಿ' ಎಂಬ ಪತ್ರಿಕೆಯಲ್ಲಿ ಬರೆದಿರುವ ಲೇಖನದಿಂದ ಅಬ್ಸೀನಿಯಾ ಯುದ್ಧವು ಇನ್ನೂ ೪ ವರ್ಷಗಳು ನಡೆಯುವದೆಂದು ಇಟಲಿಯವರು ಭಾವಿಸುತ್ತಿರುವಂತೆ ತಿಳಿಯಬರುತ್ತದೆ. ಆದರೆ ಇನ್ನೂ ಒಂದು ವರ್ಷ ಈ ಯುದ್ಧವು ನಡೆಯುತ್ತಿದ್ದಲ್ಲಿ ಮುಸಲೋನಿಯವರ ಮೇಲೆ ಇಟಲಿಯವರಿಗೆ ಅಸಂತುಷ್ಟಿಯುಂಟಾಗಿ ಅವರ ನಾಯಕತ್ವವು ಕೊನೆಗಾಣಬಹುದೆಂದು ಅನೇಕರು ಭಾವಿಸಿರುವರು.

'ಶಸ್ತ್ರವಿದ್ಯೆಯು ಅತಿ ಶೀಘ್ರ ಕಾಲದಲ್ಲಿ ಹೆಸರಿಲ್ಲದೆ ಹೋಗುವದೆಂದೂ ಔಷಧ ಚಿಕಿತ್ಸೆಯೇ ಪ್ರಬಲವಾಗುವದೆಂದೂ, ಇಂಡಿಯನ್ ಮೆಡಿಕಲ್ ಜರ್ನಲ್ಲಿನಲ್ಲಿ ತಿಳಿಸಲ್ಪಟ್ಟಿದೆ ಹೋಗಲಿ; ಆ ಕಾಲ ಬಂದಾಗಲಾದರೂ ಆಯುರ್ವೇದ ವೈದ್ಯರು ಏಕೆ ಹೆಚ್ಚು ಶಸ್ತ್ರ ಚಿಕಿತ್ಸೆಯಲ್ಲಿ ಮನಸ್ಸು ಕೊಡುವದಿಲ್ಲ ಎಂಬ ವಿಷಯವು ತಿಳಿಯಬರುವುದು.

ಕ್ಯಾಲಿಫೋರ್ನಿಯಾದಲ್ಲಿ ಬೆಳಿಸಿರುವ ಒಂದು ಆಲೂಗೆಡ್ಡೆಯು ೧೧ ಅಂಗುಲ ಅಗಲವುಳ್ಳದ್ದಾಗಿ ೧೪ ಪೌಂಡು ೩ ಔನ್ಸು ತೂಕವಾಗಿಯೂ ಇರುತ್ತದೆ. ಇಷ್ಟರವರೆಗೂ ಯಾರೂ ಇಷ್ಟು ತೂಕವುಳ್ಳ ಗೆಡ್ಡೆಯನ್ನು ಬೆಳಿಸಿರವುದಿಲ್ಲ.

ಪ್ರಾಂಗ್‌ಹಾಯ್ ಪ್ರಾಂತ್ಯದಲ್ಲಿ ಧೈರ್ಯಶಾಲಿನಿಯಾದ ಒಬ್ಬ ಚೀನಾ ಯುವತಿಯು ಅಲ್ಲಿನ ಸರ್ಕಾರದ ವಿರುದ್ಧವಾಗಿ ೨ ಸಾವಿರ ಸೈನಿಕರನ್ನು ಕಟ್ಟಿಕೊಂಡು ತಾನೇ ಸೇನಾನಾಯಕಿಯಾಗಿ ಸರ್ಕಾರವನ್ನು ತಲ್ಲಣಗೊಳಿಸುತ್ತಿರುವಳು.

ರಾಜಕೀಯ ಖಂಡಿಗಳ ವಿಷಯದಲ್ಲಿ ಯೋಚಿಸಿ, ಅವರ ಬಿಡುಗಡೆಗಾಗಿ ಪ್ರಯತ್ನಿಸಲು ಕಾಂಗ್ರೆಸ್ಸಿನ ಕಡೆಯಿಂದ ಒಂದು ಕಮಿಟಿ ನೇಮಕವಾಗಿದೆ.

"ಜ್ಞಾನವು ವಾಯವ್ಯದಿಂದ ಯೂರೋಪಿನ ಕಡೆಗೆ ತನ್ನ ಕಿರಣಗಳನ್ನು ಪ್ರಸರಿಸುತ್ತಲಿದೆ. ಶ್ವೇತವರ್ಣದವರಿಗೆ ಇಂದಿನವರಿಗೂ ಮೂಡಲೇ ಆದರ್ಶ ವ್ಯಾಯವಾಗಿರುವದು"—ಹೀಗೆಂದು ಡಾ॥ ಫ್ರಾನ್ಸಿಸ್ ವೊಲ್ಕಾಸ್ಯನವರು ಅಭಿಪ್ರಾಯಪಟ್ಟಿರುವರು.

ಮೈಸೂರು ವಾರ್ತೆ

ಬೆಂಗಳೂರು ಕೋಟೆಯಲ್ಲಿ ಕಟ್ಟಿರುವ ಮೈಸೂರು ಸಂಸ್ಥಾನದ "ಸ್ಕಾಟ್ಸ್" ಪ್ರಧಾನಕಾರ್ಯಾಲಯದ ಕಟ್ಟಡದ ಪ್ರವೇಶ ಮಹೋತ್ಸವವನ್ನು ನವೆಂಬರ ೨೫ನೇ ಶನಿವಾರ ಮೈಸೂರು ಸಂಸ್ಥಾನದ ದಿವಾನರಾದ ಆಮಿರ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರು ಒಂದು ಅಮೋಘವಾದ ಭಾಷಣವನ್ನು ಮಾಡಿದರು.

ಮದ್ರಾಸಿನಲ್ಲಿ ಪ್ರಕಟವಾಗುವ ಹಿಂದೂಪತ್ರಿಕೆಯು ಬೆಂಗಳೂರಿನಲ್ಲಿ ಹೆಚ್ಚು ಪ್ರಚಾರವಾಗುವುದರಿಂದ ಮೈಸೂರು ಸರ್ಕಾರಕ್ಕೆ ಈ ಪತ್ರಿಕೆಯ ಪ್ರತಿನಿಧಿಗಳಿಗೆ ವರ್ತಮಾನತೆರಿಗೆಯನ್ನು ಕೊಡಬೇಕೆಂದು ಸಂಸ್ಥಾನದ ಹೈಕೋರ್ಟಿನಲ್ಲಿ ತೀರ್ಮಾನವಾಗಿದೆ.

ಮೈಸೂರು ವಿಶ್ವವಿದ್ಯಾಲಯದ ಸಂಘದ ವಾರ್ಷಿಕೋತ್ಸವವು ಈ ತಿಂಗಳು 29 ನೇ ತಾರೀಖಿನ ದಿವಸ ವಿದ್ಯಾಭ್ಯಾಸಾ ಇಲಾಖಾ ವರಿಷ್ಠಾಧಿಕಾರಿಗಳಾದ ವ॥ ಆರ್. ಎಸ್. ಸುಬ್ಬರಾಯರವರ ಅಧ್ಯಕ್ಷತೆಯಲ್ಲಿ ನಡೆಯುವುದಾಗಿ ತಿಳಿಯುಬಂದಿದೆ.

ರಾಜಧಾನಿಯ ಇಂಪ್ರೂವ್‌ಮೆಂಟ್ ಕಮಿಟಿಯ ಮೊದಲ ಸಭೆಯು ಕಳೆದ 19 ನೇ ತಾರೀಖಿನ ದಿವಸ ನಡೆಯಿತೆಂದೂ, ಚೇರಿಮ್ಯನ್‌ರಲ್ಲಿ ಶ್ರೀ ಜಯಚಾಮರಾಜ ಒಡೆಯರವರಿಗೆ ಎಲ್ಲಾ ವಿದ್ಯಾರ್ಥಿಗಳಿಗಿಂತ ಹೆಚ್ಚು ಸಂಖ್ಯೆ ಬಂದು ಪ್ರಥಮಸ್ಥಾನ ದೊರಕಿದ್ದರಿಂದ, ಅವರಿಗೆ ಶ್ರೀ ಬಾಪೂ ಸುಬ್ಬರಾಯರ ಸ್ಮಾರಕ ಬಹುಮಾನವು ದೊರೆಯಿತೆಂದೂ ತಿಳಿಯಬಂದಿದೆ.

ಮ॥ ಅಗ್ರಂ ರಂಗಯ್ಯನವರು ಕೈ॥ ಶ್ರೀವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಸ್ಮಾರಕವಾಗಿ "ಸಾಧ್ವಿ" ವಾರಪತ್ರಿಕೆಯನ್ನು ಹೊರಡಿಸಲು ತೊಡಗಿ, ಅದರ ಪ್ರಾರಂಭೋತ್ಸವವನ್ನು ವ॥ ಎ ಸುಬ್ರಹ್ಮಣ್ಯಯ್ಯರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಡೆಸಿದರು. ಮತ್ತು ಈ ಸಂದರ್ಭದಲ್ಲಿ ನಿನ್ನೆ ಸಾಯಂಕಾಲ ಬಂದು ಟೀ ಪಾರ್ಟಿಯನ್ನು ನಡೆಸಿದರು.

ಸಾದರ ಸ್ವೀಕಾರ

ಮ॥ ಅಗ್ರಂ ರಂಗಯ್ಯನವರು, ಶ್ರೀವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ "ಸಾಧ್ವಿ" ಪತ್ರಿಕೆಯನ್ನು ಪ್ರಕಟಿಸಲು ಪ್ರಾರಂಭಿಸಿರುವರಷ್ಟೆ. ಪ್ರಥಮ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಬಹುಕಾಲದಿಂದ ಪತ್ರಿಕೋದ್ಯೋಗಿಗಳು ದೇಶಸೇವಕರೂ ಆದ ಮ॥ ರಂಗಯ್ಯನವರು ವೃದ್ಧ ಪಿತಾಮಹರ ಸ್ಮಾರಕವನ್ನು ಸ್ಥಾಯಿಯಾಗಿ ಮಾಡಲು ಪ್ರಯತ್ನಿಸಿರುವುದು ತುಂಬಾ ಪ್ರಶಂಸನೀಯವೇ ಸರಿ. "ಸಾಧ್ವಿ" ಯು ದೇಶಸೇವೆಯನ್ನು ಮಾಡುತ್ತ ಚಿರಕಾಲ ಬಾಳಲೆಂದೂ ಹಾರೈಸುತ್ತೇವೆ

೦ ೦

ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿಯವರು ಸಂಸ್ಥಾನದ ೧೯೩೫-೩೬ ನೇ ಸಾಲಿನ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನ ಕಾಪಿಯೊಂದನ್ನು ನಮಗೆ ಕಳುಹಿಸಿಕೊಟ್ಟಿರುತ್ತಾರೆ. ಅದನ್ನು ಸಾದರದಿಂದ ಸ್ವೀಕರಿಸಿರುತ್ತೇವೆ. ಮುಂದೆ ಇದರ ವಿಮರ್ಶೆಯನ್ನು ಮಾಡಲಾಗುತ್ತದೆ.

ಒಬ್ಬ ಯೋಗಿರಾಜನ ಸಮಾಧಿ

ಗಂಗಾ ತೀರದಲ್ಲಿ ಡೇರಾಡೋನ್ ಎಂಬ ಪಟ್ಟಣವುಂಟು. ಇದಕ್ಕೆ 30 ಮೈಲಿಗಳ ದೂರದಲ್ಲಿ ಹೃಷೀಕೇಶವೆಂಬ ದಿವ್ಯ ಕ್ಷೇತ್ರವಿದೆ. ಈ ಪವಿತ್ರ ಕ್ಷೇತ್ರದಲ್ಲಿಯ ಮಾಯಗುಂಡವೆಂಬ ಪ್ರದೇಶದಲ್ಲಿ ಒಬ್ಬ ಯೋಗಿಯು ಸಮಾಧಿಸ್ಥಿತಿಯಲ್ಲಿರಲು, ಯೋಗ್ಯವಾದ ಹಳ್ಳವನ್ನು ಅಗಸಿ, ಅದರಲ್ಲಿ ತಪಸ್ವಿಗೆ ಕುಳಿತು, ತನ್ನ ಮೇಲೆ ಮಣ್ಣನ್ನು ಮುಚ್ಚಿ ಅದರ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟಿಸಲು ಶಿಷ್ಯರನ್ನು ಕೋರಿದನು. ಅವರು ಹಾಗೆಯೇ ಮಾಡಿದರು. ಹೀಗೆ ಆ ಯೋಗಿರಾಜನು 31 ದಿವಸಗಳವರೆಗೂ ಯೋಗಾಭ್ಯಾಸ ಮಾಡುತ್ತಿದ್ದನು. ತನ್ನ ಶಿಷ್ಯರೊಂದಿಗೆ ತನ್ನನ್ನು 2 ತಿಂಗಳವರೆಗೂ ಸಮಾಧಿಸ್ಥಿತಿಯಲ್ಲಿರುವಂತೆ ಮಾಡಬೇಕೆಂದು ಕೋರಿದ್ದನಂತೆ. ಅವರೂ ಅದಕ್ಕೆ ಒಪ್ಪಿಗೆಯನ್ನು ಕೊಟ್ಟಿದ್ದರು. ಈ ವಿಷಯವು ಅಲ್ಲಿಯ ಮಾಜಿಸ್ಟ್ರೇಟರಿಗೆ ತಿಳಿಯಿತು. ಆ ಯೋಗಿಯು ಉಸಿರಾಡದೆ ಸತ್ತಿರಬೇಕು. ಆತ್ಮಹತ್ಯೆಯ ವದಲ್ಲಿ ಶಿಷ್ಯರಿಗೆ ಹೀಗೆ ಬೋಧಿಸಿ ಅವರಿಂದ ಹೀಗೆ ಮಾಡಿಸಿಕೊಂಡಿರುವನು" ಎಂದು ಭಾವಿಸಿ, ಆ ಯೋಗಿಯ ಶಿಷ್ಯರನ್ನು ಕರೆಸಿ ಸಮಾಧಿಯನ್ನು 31 ನೆಯ ದಿವಸ ಹಾರೆಯಿಂದ ಅಗಿಸಿದನು. ಆಗ ಯೋಗಿರಾಜನು ತನ್ನಷ್ಟಕ್ಕೆ ತಾನೇ ಎದ್ದು ಯಾವ ಬಗೆಯ ಆಯಾಸವಾಗಲಿ, ಬಳಲಿಕೆಯಾಗಲಿ ಇಲ್ಲದವನಂತೆ, ತನ್ನನ್ನು ಆಶ್ಚರ್ಯದಿಂದ ನೋಡುತ್ತಿದ್ದ ಜನಗಳ ನಡುವೆ ದಾರಿಮಾಡಿಕೊಂಡು ಹೊರಬಂದೋದನು. ತನ್ನ ನಿಯಮವು ಭಂಗವಾದುದಕ್ಕಾಗಿ ಯೋಗಿರಾಜನು ಬಹಳ ವ್ಯಸನಪಟ್ಟನು. ಈ ಸಮಾಧಿಯನ್ನು ಆಗೆಯಲು ಆರ್ಡರುಮಾಡಿದ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟು ಬಿ.ಜೆ. ಕೆ. ಹಾಲೊನರ್ ರವರು ಆಶ್ಚರ್ಯಚಕಿತರಾದರು. ಈ ಬಗೆಯಲ್ಲಿ ಹಿಂದೂಗಳ ಜಪತಪ ಮಹಿಮೆಗಳನ್ನು ಅರಿಯದವರ ಆಲ್ಪಿಕೆಯಲ್ಲಿ ಈಗ ಹಿಂದೂದೇಶವು ಇರುತ್ತದೆ. ಉತ್ತರ ಹಿಂದೂಸ್ಥಾನದಲ್ಲಿ ಇದನ್ನು ಕೇಳಿ ಅನೇಕರು ಆಶ್ಚರ್ಯಗೊಳ್ಳುತ್ತಿರುವರು. ಪ್ರಸ್ತುತ ಪ್ರಕೃತಿಶಾಸ್ತ್ರ ವಿದ್ವಾಂಸರು ಇದಕ್ಕೆ ಏನು ಹೇಳುವರೋ? ಇದನ್ನು ಜಾಲವಿದ್ಯೆಯೆನ್ನುವರೇನೋ? ಅಥವಾ ಇದರ ಪ್ರಸ್ತಾಪವನ್ನೇ ಮಾಡದೆ ಇರುತ್ತಾರೆಯೋ, ನೋಡಬೇಕು.

ಒಂದು ಮಿಲ್ಲಿಯನ್ನು ಹಣವನ್ನು ವೆಚ್ಚಮಾಡಿ ವಿಶಾಲವಾದ ಹಾರ್ಬರನ್ನು ನ್ಯೂಯಾರ್ಕಿನ ಸಮೀಪದಲ್ಲಿ ನಿರ್ಮಾಣಮಾಡಲು ಅಮೇರಿಕಾ ಸರ್ಕಾರವು ನಿಶ್ಚಯಿಸಿರುತ್ತದೆ. ಅಲ್ಲಿ ಪದಾರ್ಥಗ್ಗಳನ್ನು ತುಂಬಲು ಏಳು ಅಂತಸ್ತುಗಳ ಭವನವನ್ನು ಕಟ್ಟುವರು. ಯಾವ ಬಗೆಯ ಸಂಕವೂ ಇಲ್ಲದೆ ಎಲ್ಲಾ ದೇಶಗಳ ಪದಾರ್ಥಗಳು ಅಲ್ಲಿಗೆ ಬರಲು ಮತ್ತು ಅಲ್ಲಿಂದ ಹೋಗಲು ಅವಕಾಶವಿರುತ್ತದೆ.

ಮೈಸೂರು ಸಹಕಾರ ಸಮಿತಿಯವರು ರಾಜಧಾನಿಯಲ್ಲಿನ ಸಹಕಾರ ಸಂಘಗಳ ಅಧಿಕಾರಿಗಳನೇಕರ ಸಾಕ್ಷ್ಯವನ್ನು ತೆಗೆದುಕೊಂಡ ಬೆಂಗಳೂರಿಗೆ ಪ್ರಯಾಣಮಾಡಿದರೆಂದು ತಿಳಿಯಬಂದಿದೆ.

ಅಮೇರಿಕದ ಅಲ್ಬಾಮಾದಲ್ಲಿ ೨೦ ಮಂದಿ ನೀಗ್ರೋ ಖೈದಿಗಳನ್ನು ಒಂದು ಮೋಟಾರು ಲಾರಿಯಲ್ಲಿ ಕೂಡಿ ತೆಗೆದುಕೊಂಡು ಹೋಗುತ್ತಿರಲಾಗಿ ಒಳಗಿದ್ದ ಪಟ್ರೋಲು ಡಬ್ಬಾ ಉರಿದನಂತರ ಖೈದಿಗಳೆಲ್ಲರೂ ಉರಿಯಲ್ಲಿ ಸತ್ತರಂತೆ. ಲಾರಿಯನ್ನು ನಾಲ್ಕು ಕಡೆಗಳಲ್ಲಿಯೂ ಬಿಗಿಸಿದ್ದದ್ದರಿಂದ ಇಂತಹ ಅಪಾಯವು ಪ್ರಾಪ್ತವಾಯಿತೆಂದು ತಿಳಿಯಬಂದಿದೆ.

ಇಷ್ಟರವರಿಗೂ ಬರ್ಮಾಕ್ಕೆ ಸೇರಿದ್ದ ಅಂಡಮಾನ್ ನಿಕೊಬಾರ್ ದ್ವೀಪಗಳನ್ನು ಅಸ್ಸಾಂ ಸರ್ಕಾರಕ್ಕೆ ಸೇರಿಸುವರು. ಬರ್ಮಾವನ್ನು ಇಂಡಿಯಾದಿಂದ ಬೇರ್ಪಡಿಸಿದ್ದರಿಂದ ಹೀಗೆ ಮಾಡಿರುವರು.

ದೆಹಲಿಯಲ್ಲಿ ೧೦,೦೦೦ ರೂಪಾಯಿಗಳನ್ನು ಖರ್ಚುಮಾಡಿ ಹರಿಜನರಿಗಾಗಿ ಒಂದು ದೇವಾಲಯವನ್ನು ನಿರ್ಮಾಣಮಾಡಲು ಏರ್ಪಾಡುಗಳನ್ನು ಮಾಡಿರುವರು.

Shanmukhavilas

Coffee Club

Jaganmohan Palace Road

MYSORE

— for —

EXCELLENT TIFFIN, & COFFEE



ಶಕ್ತಿಸಾಧನೆಯ ಸುಲಭೋಪಾಯಗಳು.

ಶಕ್ತಿಯುಂ ಆರೋಗ್ಯವೂ ಪರಸ್ಪರ ಸಂಬಂಧವಿರುವ ಎರಡು ತತ್ವಗಳು. ಆರೋಗ್ಯವಿಲ್ಲದೇ ಶಕ್ತಿಯು ಹೆಚ್ಚಲಾರದು. ಶಕ್ತಿಯು ಇಲ್ಲದಿದ್ದರೆ ಆರೋಗ್ಯವಿರುವ ಸಂಭವವೂ ಕಡಮೆ. ಆದ್ದರಿಂದ ಮನುಷ್ಯನಿಗೆ ಶರೀರದಲ್ಲಿ ಆರೋಗ್ಯವೂ ಶಕ್ತಿಯೂ ಅತಿ ಮುಖ್ಯವಾದುವು; ಇವೆರಡೂ ಇದ್ದಲ್ಲಿ ಮನುಷ್ಯನು ಯಾವ ಕೆಲಸವನ್ನಾದರೂ ನಿರಾಯಾಸವಾಗಿ ಮಾಡಬಲ್ಲನು.

ಹಣವನ್ನು ಸಂಪಾದಿಸುವದಕ್ಕಾಗಿ ದುಡಿಯಬೇಕಾದರೆ ಶಕ್ತಿಯೂ ಆರೋಗ್ಯವೂ ಇಲ್ಲದೆ ಸಾಧ್ಯವಿಲ್ಲ. ಸಾಧಾರಣಾರ್ಥಿಕ ದೃಷ್ಟಿಯಿಂದ ನೋಡಿದರೂ ವ್ಯಾಯಾಮ, ನಿಯಮ, ಭಗವದ್ಧ್ಯಾನ, ಯೋಗಾಭ್ಯಾಸಾದಿಗಳನ್ನು ಮಾಡಿ ಮೋಕ್ಷವನ್ನು ಹೊಂದುವದಕ್ಕೂ ಶಕ್ತಿಯು ಅತ್ಯಾವಶ್ಯಕವಾದುದು. ಸಾಂಸಾರಿಕ ರೀತಿಯಿಂದ ಇಹಲೋಕ ಸುಖಾಪೇಕ್ಷಿಗಳಾದವರಿಗೆ ತಮ್ಮ ಇಚ್ಛಿತವಾದ ವಿಷಯ ಸುಖಾದಿಗಳ ಉಪಭೋಗಕ್ಕಂತೂ ಸಂಪೂರ್ಣವಾಗಿ ಶಕ್ತಿಯು ಇರಲೇಬೇಕು. ಮಾನವನಿಗೆ ಅದೊಂದು ಜೀವನದ ತತ್ವವಾದ ಶಕ್ತಿಯು ಯಾರಿಗೆ ಬೇಡ? ಎಲ್ಲರಿಗೂ ಬೇಕೇಬೇಕು. ವಿದ್ಯಾರ್ಥಿಗಳಿಗೆ ತಾವು ಕಲಿತ ಪಾಠಗಳನ್ನು ಜ್ಞಾಪಕದಲ್ಲಿ ನಿಲ್ಲುವಂತೆ ಮಾಡುವುದು ಶಕ್ತಿ! ಯುವಕ ಯುವತಿಯರಿಗೆ ತಮ್ಮ ಯೌವನದ ಪ್ರಯೋಜನವನ್ನು ಸಂಪೂರ್ಣವಾಗಿ ಹೊಂದುವಂತೆ ಮಾಡುವುದು ಶಕ್ತಿ! ವೃದ್ಧರಿಗೂ ಕೂಡ ಶರೀರವು ದೃಢವಾಗಿ ಬಲಹೀನತೆ ಇಲ್ಲದಂತೆ ಕಾಪಾಡುವುದೂ ಶಕ್ತಿ! ಸಂಗೀತಗಾರರು ತಮ್ಮ ಮನೋಧರ್ಮವನ್ನು ಯಥಾಸ್ಥಿತಿಯಾಗಿ ವ್ಯಕ್ತಪಡಿಸಿ ತಮ್ಮ ವಿದ್ಯೆಯ ಸಾಮರ್ಥ್ಯವನ್ನು ಸಭಿಕರಿಗೆ ತೋರುವಂತೆ ಮಾಡಲು ಶರೀರವು ಏಕರೀತಿಯಲ್ಲಿರುವಂತೆ ಮಾಡುವುದು ಶಕ್ತಿ! ದೇಶದೇಶಾಂತರಗಳಲ್ಲಿ ಪ್ರಯಾಣಮಾಡುವ ವ್ಯಾಪಾರಸ್ಥರೇ ಮೊದಲಾದವರ ಆರೋಗ್ಯವು ಕೆಡದಂತೆ ಮಾಡುವುದೂ ಶಕ್ತಿಯೇ! ಹೆಚ್ಚೇಕೆ--ಮನುಷ್ಯ ಮಾತ್ರದವಂಗೆ ಯಾವ ವಿಧದಿಂದ ನೋಡಿದರೂ ಶಕ್ತಿಯು ಆವಶ್ಯಕವು.

ಶಕ್ತಿಯಿದ್ದವನಿಗೆ ಎಲ್ಲವೂ ಸಾಧ್ಯವು. ಶಕ್ತಿಯ ದೆಸೆಯಿಂದ ಭಾರತದಲ್ಲಿ ಮಹಾವೀರನೆಂದು ಪ್ರಸಿದ್ಧಿಪಡೆದ ಅರ್ಜುನನು ಪಶುಪತೇಶ್ವರನೊಡನೆ ಯುದ್ಧಮಾಡಿ ಆತನನ್ನು ಒಲಿಸಿಕೊಂಡನು. ಶಕ್ತಿಯ ದೆಸೆಯಿಂದಲೇ ಭೀಮನು ಅತ್ಯಂತ ಪರಾಕ್ರಮಶಾಲಿಗಳಾದ ಜರಾಸಂಧ ದುರ್ಯೋಧನಾದಿಗಳನ್ನು ಗೆದ್ದನು. ಶಕ್ತಿಯೇ ಹನುಮಂತನಿಗೆ ಬಲಾಢ್ಯನೆಂಬ ಕೀರ್ತಿಯನ್ನು ತಂದಂಥಾದ್ದು. ರಾವಣ ಹಿರಣ್ಯಾಕ್ಷ ಮೊದಲಾದವರು ದೇವತೆಗಳನ್ನು ಕೂಡ ತಮ್ಮ ಅಧೀನದಲ್ಲಿಟ್ಟುಕೊಳ್ಳಲು ಸಹಾಯವಾಯಿತೂ ಶಕ್ತಿಯೇ! ಶಕ್ತಿಯ ದೆಸೆಯಿಂದ ನರಪೋಲಿಯನನು ಪ್ರಪಂಚವನ್ನೇ ಗೆಲ್ಲುವ ಸಾಹಸಿಯೆಂದು ಖ್ಯಾತಿಗೊಂಡಿದ್ದು. ಮೈಸೂರು ಹುಲಿ ಎಂದು ಪ್ರಸಿದ್ಧನಾದ ಟಿಪ್ಪುಸುಲ್ತಾನನ ಕೀರ್ತಿಗೂ ಶಕ್ತಿಯೇ ಮೂಲಕಾರಣವಲ್ಲವೇ?

ಇಂತಹ ಅದ್ಭುತವಾದ ಮತ್ತು ಅಸಾಧಾರಣವಾದ ಮಹಿಮೆಯುಳ್ಳದ್ದು ಶಕ್ತಿಯು. ಶಕ್ತಿವಂತರಾಗಿಯೂ, ಆರೋಗ್ಯವಂತರಾಗಿಯೂ ಇರಬೇಕೆಂಬ ಆಶೆಯು ಪ್ರತಿಯೊಬ್ಬರಿಗೂ ಉಂಟಾಗುವುದು ಸಹಜವಷ್ಟೆ. ಪೂರ್ಣ ಬಲಶಾಲಿಗಳಾಗಿಯೂ, ಆರೋಗ್ಯವಂತರಾಗಿಯೂ ಇರುವುದಕ್ಕೆ ನಮ್ಮ ಸುಪ್ರಸಿದ್ಧವಾದ

ಶಕ್ತಿಸುಧಾ

ವನ್ನು ಸೇವಿಸಿರಿ. ಇದರ ಸೇವನೆಯು ನಿಮ್ಮನ್ನು ಆರೋಗ್ಯವಂತರಾಗಿಯೂ, ವಜ್ರಕಾಯಶರೀರರನ್ನಾಗಿಯೂ ಮಾಡುವುದು. ಇದು ಪ್ರಾಚೀನ ವೈದ್ಯಗ್ರಂಥಗಳ ಶೋಧನೆಯಿಂದ ತಯಾರಿಸಲ್ಪಟ್ಟಿದೆ. ಅನೇಕರು ಇದನ್ನು ಸೇವನೆಮಾಡಿ ತುಂಬಾ ಪ್ರಯೋಜನಹೊಂದಿ ಪ್ರಶಂಶಿಸಿರುತ್ತಾರೆ. ಇದರ ಶ್ರೇಷ್ಠತೆಯ ಸಲುವಾಗಿ ಅನೇಕ ವಸ್ತುಪ್ರದರ್ಶನಗಳಲ್ಲಿ ಮೆಡಲುಗಳೂ, ಸರ್ಟಿಫಿಕೇಟುಗಳೂ ಒಂದಿರುತ್ತವೆ. ಯಾವ ಮತಾಚಾರಕ್ಕೂ ವಿರುದ್ಧವಿಲ್ಲದ, ಕೇವಲ ಶಕ್ತಿವರ್ಧಕ ಮತ್ತು ಪೌಷ್ಟಿಕಗುಣಗಳುಳ್ಳ ಅಪೂರ್ವ ವನಸ್ಪತಿಗಳಿಂದ ತಯಾರಾದುದು ಇದರಲ್ಲಿ ಅಪಾಯಕರವಾದ ಯಾವ ವಸ್ತುವೂ ಇಲ್ಲ.

ಶಕ್ತಿಸುಧೆಯನ್ನು ಸೇವಿಸುವ ಕಾಲದಲ್ಲಿ ಅಹಾರ ಪಾನೀಯ ನಿಯಮವಾಗಲಿ, ಕಠಿಣಪಥ್ಯವಾಗಲಿ ಇಲ್ಲ. ಸರ್ವಸಾಧಾರಣ ಆರೋಗ್ಯ ನಿಯಮಗಳನ್ನು ಅನುಸರಿಸಿದರೆ ಸಾಕು; ಯುಕ್ತ ಗುಣವು ಸ್ವಲ್ಪ ಕಾಲದಲ್ಲಿಯೇ ಕಂಡು ಬರುವುದು.

ಬಾಲ್ಯದಲ್ಲಿ ಅವಿಚಾರಾದಿ ದೆಸೆಯಿಂದಲಾಗಲಿ, ಅತಿ ಸಂಭೋಗದಿಂದಾಗಲೀ ವೀರ್ಯವನ್ನು ಕಳೆದುಕೊಂಡು, ತೇಜೋಹೀನರೂ, ಬಲಹೀನರೂ ಆದವರಿಗೆ "ಶಕ್ತಿಸುಧೆ" ಯು ನವತೇಜಸ್ಸನ್ನೂ ಒಳಕುಷ್ಟಿವುಷ್ಟಿಯನ್ನೂ ಉಂಟುಮಾಡುತ್ತದೆ. ಇದು ಸಕಲ ವಿಧವಾದ ಧಾತುವಿಕಾರಗಳಿಗೆ ರಾಮಬಾಣವು

ಸಹಜವಾದ ಅಶಕ್ತತೆಯಿಂದಾಗಲೀ, ವಯೋಧರ್ಮದಿಂದಾಗಲೀ, ಇಂದ್ರಿಯ ದೌರ್ಬಲ್ಯವನ್ನು ಹೊಂದಿ, ಮನೋವ್ಯಥೆಯಿಂದ ಪೀಡಿತರಾದವರಿಗೆ "ಶಕ್ತಿಸುಧೆ" ಯು ನವಚೈತನ್ಯವನ್ನೇ ಉಂಟುಮಾಡಿ, ಉತ್ಸಾಹದಿಂದ ಸುಖವನ್ನು ಅನುಭವಿಸಿ ಆನಂದಪಡಲು ಸಹಾಯವನ್ನೂ ಮಾಡುತ್ತದೆ.

"ಶಕ್ತಿಸುಧೆ" ಯು ರಕ್ತವೃದ್ಧಿಯನ್ನೂ ಧಾತುಪುಷ್ಟಿಯನ್ನೂ ಉಂಟುಮಾಡುವುದು. ಪ್ರತಿಯೊಬ್ಬರೂ, ತಮ್ಮ ತಮ್ಮ ಕೆಲಸಗಳನ್ನು ಆಯಾಸವಿಲ್ಲದೆ ಮಾಡುವಂತೆ ಉತ್ಸಾಹವನ್ನು ಕಂದುಕೊಡುತ್ತದೆ.

ಸ್ತ್ರೀಯರು ಮುಟ್ಟಾಗುವ ಕಾಲದಲ್ಲಿ ಬರುವ ಸೊಂಟನೋವು, ಹೊಟ್ಟೆನೋವು, ಅಕ್ರಮಸೂತಕವನ್ನೂ, ನಿಶ್ಯಕ್ತಿಯನ್ನೂ ಗುಣಪಡಿಸಿ ಅವರ ಸ್ವಾಭಾವಿಕವಾದ ಸೌಂದರ್ಯವನ್ನು ವೃದ್ಧಿಮಾಡುವುದು.

ವಿದ್ಯಾರ್ಥಿಗಳು ಪಾಠಗಳನ್ನು ಚೆನ್ನಾಗಿ ಕಲಿಯುವದಕ್ಕೂ, ಕಲಿತುದನ್ನು ಮರೆತುಹೋಗದಂತಹ ಒಳ್ಳೆಯ ಜ್ಞಾಪಕಶಕ್ತಿಯಿರುವಂತೆ ಮೆದುಳಿಗೆ ಶಕ್ತಿಯನ್ನು ಕೊಡುವುದಕ್ಕೂ "ಶಕ್ತಿಸುಧೆ" ಯು ವರಪ್ರಸಾದವು.

ಅಜೀರ್ಣ, ಅಗ್ನಿಮಾಂದ್ಯ ಮಲಬದ್ಧತೆ, ಇತ್ಯಾದಿ ಸಾಮಾನ್ಯ ಖಾಯಿಲೆಗಳು ಈ "ಶಕ್ತಿಸುಧೆ" ಯನ್ನು ಉಪಯೋಗಿಸುವವರಿಗೆ ಇರುವುದೇ ಇಲ್ಲ.

ಆರೋಗ್ಯವನ್ನು ಕಾಪಾಡಿ ಶಕ್ತಿಯನ್ನು ಹೆಚ್ಚಿಸುವವರೆಲ್ಲಿ ಅವ್ಯರ್ಥವಾದ "ಶಕ್ತಿಸುಧೆ" ಯನ್ನು ಸೇವಿಸಿ ಸರ್ವರೂ ಪ್ರಯೋಜನ ಹೊಂದಿರಿ.

ಬೆಲೆ ಡಬ್ಬಿ ಒಂದಕ್ಕೆ ಒಂದು ರೂಪಾಯಿ. ಟ. ಖ ದೇರೆ.

ಶಕ್ತಿಸುಧಾ ಕಾರ್ಯಾಲಯ ಸತ್ಯವಾದಿ ಬಿಲ್ಡಿಂಗ್ಸ್, ಚಾಮರಾಜೇಪುರಂ, ಮೈಸೂರು

Weekly Newspaper

SATYAVADI

Every Wednesday

MYSORE (Founded 1917) 26—2—36

ಕಛೇರಿಯಲ್ಲಿ ಹಗಲೆಲ್ಲ ದುಡಿದ ಬಳಿಕವಾಗಲಿ,

ದಿನಚರಿಯ ವ್ಯಾಯಾಮಗಳು ಪೂರೈಸಿದನಂತರವಾಗಲಿ,

ಅಥವ ಧೂಳು ಮತ್ತು ಬಿಸಿಲಿನಲ್ಲಿ ವ್ಯಾಪಾರಗಳನ್ನು ಮುಗಿಸಿದಮೇಲಾಗಲಿ

ದಣಿದ ದೇಹವನು

ಯಥಾಸ್ಥಿತಿಗೆ ತರಲು

ಮೈಸೂರು ಗಂಧದ ಸಾಬೂನಿನ

ಶಕ್ತಿವರ್ಧಕ ಸ್ನಾನಕ್ಕೆ

— ಸರಿಸಮವಾದುದು ಮತ್ತಾವುದೂ ಇಲ್ಲ —

ಮತ್ತು, ಇದು ಅತ್ಯಲ್ಪ ಬೆಲೆಯುಳ್ಳದ್ದಾಗಿದೆ.

ಅರುಣೋದಯದ

ವಿಜಯನಗರಸಾಮ್ರಾಜ್ಯ ಸಂಚಿಕೆಯು

ತನ್ನ ಎಲ್ಲ ವೈಭವದೊಂದಿಗೆ ಬೇಗನೆ

ಓದುಗರ ಕೈಸೇರುವುದು.

ಅಖಿಲ ಕರ್ನಾಟಕದೊಳಗಿನ ವಿಖ್ಯಾತ ಸಾಹಿತಿಗಳಿಂದ ಒರೆಯಲ್ಪಟ್ಟ ವಿದ್ವತ್ತಾಪ್ರಚುರವಾದ ಲೇಖನಗಳಿಂದ ಕೂಡಿದ ಮತ್ತು ವಿವಿಧ ವಿಜಯನಗರ-ಸಾಮ್ರಾಜ್ಯದ ವೈಭವವನ್ನು ವ್ಯಕ್ತಪಡಿಸುವ ಅನೇಕ ಅಂದವಾದ ಚಿತ್ರಗಳನ್ನೊಳಗೊಂಡ, ಬಂಹಗಾತರ ಅಲ್ಪ ಪರಿಚಯ ಹಾಗು ಭಾವ ಚಿತ್ರಗಳಿಂದಲೂ ಶೋಭಿಸುವ ಅತ್ಯಂತ ಮಹತ್ವಪೂರ್ಣವಾದ ಹಾಗೂ ಕನ್ನಡಿಗರಿಗೆ ಅತ್ಯಂತ ಅಭಿಮಾನದ ವಿಷಯವಾಗಿರುವ ಜಯಕರ್ನಾಟಕದ ಆಕಾರದ ೨೫೦—೨೫೦ ಪುಟಗಳನ್ನು ಮಿಕ್ಕಿ ಹೊರಡುತ್ತಿರುವ ಹೆಬ್ಬೊತ್ತಿಗೆಯ ಬೆಲೆಯು ಕೇವಲ ೨ ರೂಪಾಯಿ

ಅರುಣೋದಯದ ಚಂದಾದಾರರಿಗೆ ೧—೮—೦ ಮಾತ್ರ

ಬೇಗನೆ ಆರ್ಡರಕೊಟ್ಟು ಸಂಚಿಕೆಯನ್ನು ಕಾದಿಡಲಿಕ್ಕೆ ತಿಳಿಸಬೇಕು.

ಜಾಹೀರಾತುಗಾರರು ಬೇಗನೆ ತಮ್ಮ ತಮ್ಮ ಜಾಹೀರಾತುಗಳನ್ನು ಅಡ್ವಾನ್ಸ ಹಣದೊಂದಿಗೆ ಕಳಿಸಬೇಕೆಂದು ಕೋರುತ್ತೇವೆ.

ಕರ್ನಾಟಕದ ಮುಖ್ಯ ಮುಖ ಕೇಂದ್ರಗಳಲ್ಲಿ ಅದರ ಮಾರಾಟಕ್ಕಾಗಿ ಏಜೆಂಟರು ಬೇಕು.

ನೂರಕ್ಕೆ ೧೫ ೨೦ ವರೆಗೆ ಕಮಿಷನ್ ಕೊಡಲಾಗುವುದು ಹೊತ್ತಾಗಿ ೨೫ ರೂ. ಬಹುಮಾನ ಆಕರ್ಷಕ ಯೋಜನೆ

ಡಿಪಾಜಿಟ್ ಹಣವಿಡಲು ಸಮರ್ಥರಿರುವ ಜನರಷ್ಟೇ ಉತ್ತರಕ್ಕಾಗಿ ೧ ಆಣೆ ಸ್ಟ್ಯಾಂಪನ್ನಿಟ್ಟು ವಿಶೇಷ ಮಾಹಿತಿಗಾಗಿ ಬರೆದುಕೊಳ್ಳಬೇಕು.

ಮ್ಯಾನೇಜರ,

ಅರುಣೋದಯ, ಬೆಳಗಾವಿ.

Edited, Printed & Published by M. S. Krishna Rao, at the Satyavadi Press, Satyavadi Buildings, Chamaraj Agrahar, Mysore.

Shiromani NARAYANACHARYA

Chowkambha, Benarese.

S.U.N. & CO. BENARES CITY

ಶಾಸ್ತ್ರಿಗಳೇ ! ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಣ್ಣಯ್ಯನವರೇ ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ- ಅದಕ್ಕೆ ಕಾರಣವೇನು ? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆ ಮಾಡುತ್ತಿದ್ದರು. ಅದರಿಂದ ಏನುಫಲ? ಅದನ್ನು ಧರಿಸಿದರೆ, ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭಿವೃದ್ಧಿ, ವೀರ್ಯವೃದ್ಧಿ, ಸಂಪತ್ತು, ಕೀರ್ತಿ, ಇವುಗಳೆಲ್ಲಾ ಆಗುವುವು. ಹಾಗಾದರೆ, ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವದು? ಅದು ಲೋಕಪ್ರಸಿದ್ಧಿಹೊಂದಿದ ನಮ್ಮ ಕಾಶೀ ಚೌಖಂಭಾ ಶಿರೋಮಣಿ ನಾರಾಯಣಾಚಾರ್ಯ ರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮವಾದ ರುದ್ರಾಕ್ಷೀ ದೊರೆಯುವುದು.

ಸಣ್ಣ ಅಡ್ಡೆ ಪ್ರಮಾಣದ ೫೫ ಮುಖದ ಕಂಬಸರ 1 ಕ್ಕೆ ಆಣೆ 3 ರಿಂದ ರೂ 25 ರವರಿಗೆ ; 100 ರುದ್ರಾಕ್ಷಿಗಳುಳ್ಳ ಸರ 1 ಕ್ಕೆ ಆಣೆ 3 ರಿಂದ ರೂ 25 ರವರೆಗೆ ; ಗೌರೀಶಂಕರ ರುದ್ರಾಕ್ಷಿ 1 ಕ್ಕೆ ರೂ 3 ರಿಂದ ರೂ 50 ರವರೆಗೆ ; ಮತ್ತು 3--4--6--7--8 ಮುಖಗಳ ಕಾಳು ಆಣೆ 4 ರಿಂದ ರೂ 10 ರವರಿಗೆ ; 9--10--11 ಮುಖಗಳುಳ್ಳ ಕಾಳು 1 ಕ್ಕೆ ರೂ 2 ರಿಂದ 30 ರವರಿಗೆ ; 12--13--14 ಮುಖದ ಕಾಳು 1 ಕ್ಕೆ ರೂ 5 ರಿಂದ 100 ರವರಿಗೆ. ಸಣ್ಣ ರುದ್ರಾಕ್ಷೀ ಅವರೇ ಕಾಳಿಗಿಂತ ಸಣ್ಣದಾಗುತ್ತಾ ಕ್ರಯ ಜಾಸ್ತಿ ; ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತಾ ಕ್ರಯ ಜಾಸ್ತಿ ಆಗುವುದು. [ವಿವರಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ 1 ಆಣೆ ಸ್ಟ್ಯಾಂಪು ಕಳುಹಿಸಿದರೆ 3 ಇನಾಮುಗಳು : 1 ವಿಶ್ವೇಶ್ವರ ಪಟ, 1 ಕಾಶೀನಕ್ಷೆ, 1 ಕ್ಯಾಟಲಾಗಿನೊಡನೆ 3 ಇನಾಮುಗಳು-

ವಿಳಾಸ—ಶಿರೋಮಣಿ ನಾರಾಯಣಾಚಾರ್ಯ

ಚೌಖಂಬಾ, ಬೆನಾರಿಸ್ [ಕಾಶಿ]

H. S. KAMAL SHERIFF, DENTIST

Lansdowne Buildings, Mysore.

We prepare artificial teeth with which any hard substance can be chewed. We Extract even the strongest teeth with the greatest aese. Stuffing the hollow tooth with gold and silver a speciality. Every work is done to entire satisfction.

ಸತ್ಯವಾದಿಯ ಏಜೆಂಟರು.

ಮ|| ಅನಂತರಾಮಯ್ಯನವರು,

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು.

ಕುಮಾರ್ ಅಂಡ್ ಬ್ರದರ್ಸ್

ಒಕ್ಕೇರಿ ಟಿ, ಹೊಳಲೂರು